NON-OFFICIAL RESOLUTION

***Re*: Supply of good and adequate drinking water to Bangalore City from the river Cauvery alone.**

(Debate continued)

ಶ್ರೀ ಟಿ. ಮಾದಯ್ಯಗೌಡ.—ಸ್ವಾಮಿ,......

Sri B. R. SUNTHANKAR (Belgaum City).—On a point of order, Sir. Today is the second day of non-official business and separate resolutions are allotted for each of the four days. We are now discussing yesterday's resolution. Can we take up the unfinished business of the first day on the second day when there is a separate list of resolutions allotted for today?

Mr. SPEAKER.—I refer the Hon'ble Member to Rule 29 which says:—

> "private Members' business set down for the day allotted for that class of business and not disposed of on that day shall not be set down for any subsequent day, unless it has gained priority at the ballot held with reference to that day:
>
> Provided that not withstanding anything contained in rules 28 and 29 any such business which is under discussion at the end of that day shall be set down for the next day allotted to business of that class, and shall have precedence over all other business set down for that day."

This rule is clear on that point.

†ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಅಧ್ಯಕ್ಷರೆ, ನೆನ್ನೆ ಬೆಂಗಳೂರಿಗೆ ಕುಡಿಯುವ ನೀರನ್ನೊದಗಿಸುವ ವಿಚಾರವನ್ನು ಪ್ರಸ್ತಾಪಮಾಡುತ್ತಾ ಬೆಂಗಳೂರು ನಗರ ಎಷ್ಟು ಪ್ರಾಮುಖ್ಯವಾದ ಪಟ್ಟಣ, ಜನಸಂಖ್ಯೆ ಹೇಗೆ ಬೆಳೆಯುತ್ತಿದೆ, ಅದರ ನೀರಿನ ಆವಶ್ಯಕತೆ ಹೇಗೆ ದಿನೇ ದಿನೇ ಜಾಸ್ತಿಯಾಗುತ್ತಿದೆ ಎಂದು ತಿಳಿಸಿದ್ದೆ. ಹಾಗೆಯೇ ಹೇಳುತ್ತಾ ಮೂರನೆಯ ಯೋಜನೆಯಲ್ಲಿ ಹಳ್ಳಿಮಾಲಾ ಯೋಜನೆ ತೆಗೆದುಕೊಂಡರೆ ಆ ಪ್ರಾಂತದ ಜನರಿಗೆ ಅಪರಿಮಿತವಾದ ಅನ್ಯಾಯವಾಗುತ್ತದೆ, ಆದಾಗ್ಯೂ ಕೂಡ ಕೆಲಸ ಸಮರ್ಪಕವಾಗಿ ಅಗುವುದಿಲ್ಲ ಎಂದು ಕೂಡ ಹೇಳಿದೆ. ಎರಡನೆಯದು ಶಿಂಷಾ ಯೋಜನೆ. ಅದರಿಂದಲೂ ಕೂಡ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಅಭಾವ ತಪ್ಪುವುದಿಲ್ಲ. ಅದರಿಂದಲೂ ಕೂಡ ಕೊಂಚಕಾಲ ಅನುಕೂಲವಾಗಬಹುದೇ ವಿನಾ ಸಾಕಷ್ಟು ಪ್ರಯೋಜನವಾಗಲಾರದು. ಸಾಲದ್ದಕ್ಕೆ ಶಿಂಷಾದಿಂದ ಬರುವ ನೀರು ಸೀಪೇಜ್ ವಾಟರ್. ಗದ್ದೆಗಳ ಮೇಲೆ ಹರಿಯುವ ಕೊಳೆ ನೀರನ್ನು ಕುಡಿದರೆ ಪ್ರಜೆಗಳಿಗೆ ಆರೋಗ್ಯ ದೊರೆಯುತ್ತದೆಂದು ಭಾವಿಸಲಾರೆ, ಆದುದರಿಂದ ಕಾವೇರಿಯಿಂದಲೇ ನೀರನ್ನೊದಗಿಸುವುದು ಸೂಕ್ತ. ಇವತ್ತಲ್ಲದಿದ್ದರೆ ನಾಳೆಯಾದರೂ ಆ ಕೆಲಸ ಮಾಡಲೇಬೇಕು. ಅದಕ್ಕೆ ಬದಲಾಗಿ ಈಗಲೇ ಕಾವೇರಿ ಯೋಜನೆ ಕೈಕೊಂಡು ಪೂರ್ಣ ಮಾಡುವುದು ಉತ್ತಮ. ಪ್ರಾಮುಖ್ಯವಾಗಿ ಕಾವೇರಿಯಿಂದಲೇ ನೀರನ್ನು ತರಬೇಕು ಎಂದು ಹೇಳುವುದಕ್ಕೆ ಕಾರಣ ಈ ಪಟ್ಟಣಕ್ಕೆ ಸಾಕಷ್ಟು ಒಳ್ಳೆಯ ನೀರು ಒದಗಬಹುದು ಎಂಬ ಉದ್ದೇಶವಿದೆ.

ಹಳ್ಳಿಮಾಲಾ ಯೋಜನೆಯಿಂದ ಜನರಿಗೆ ಅನಾನುಕೂಲವಾಗುತ್ತದೆ, ತೊಂದರೆ ಕೊಡಬೇಕಾಗುತ್ತದೆ, ಇದನ್ನು ಸ್ವಲ್ಪ ದೀರ್ಘವಾಗಿ ಪ್ರಸ್ತಾಪಮಾಡಬೇಕಾಗಿದೆ. ಹಿಂದೆ ಶ್ರೀಮಾನ್ ಕಂಠಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಕಾವೇರಿಯಿಂದಲೇ ನೀರು ತರುವುದಕ್ಕೆ ಪ್ರಯತ್ನ ಮಾಡುವುದಾಗಿ ಒಂದು ಕಡೆ ಹೇಳಿದರು, ಹಾಗೆಯೇ ನಮ್ಮ ಈಗಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಹಳ್ಳಿಮಾಲಾದಿಂದ ಮುಳುಗಡೆಯಾಗುವ ಪ್ರದೇಶವನ್ನು ಸಂಚಾರಮಾಡಿ ನೋಡಿದ್ದಾರೆ. ಅಲ್ಲಿನ ಜನರಿಗೇನು ತೊಂದರೆಯಾಗಬಹುದೆಂದು ಚೆನ್ನಾಗಿ ಮನಗಂಡು ಅಲ್ಲಿ ರೈತರ ಸಮ್ಮೇಳನದಲ್ಲಿ ಒಂದು ಆಶ್ವಾಸನೆ ಕೊಟ್ಟಿದ್ದಾರೆ. ಆದರೂ ಕೂಡ ಅಲ್ಲಿನ ಜನರು ಈಗಲೂ ಕಣ್ಣು ತುಂಬಾ ನಿದ್ರೆಮಾಡುತ್ತಿಲ್ಲ, ಬಹಳ ಭೀತರಾಗಿದ್ದಾರೆ. ಅವರ ಭೀತಿ ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಆ ಪ್ರಾಂತದ ಜನರಿಗೆ 4-5 ವರ್ಷಗಳಿಂದ ಸರ್ಕಾರ ಯಾವ ಅನುಕೂಲವನ್ನೂ ಮಾಡಿಕೊಡುತ್ತಿಲ್ಲ. ಒಂದು ಶಾಲೆ ಬೇಕು, ಒಂದು ಬಾವಿ ಬೇಕು, ಒಂದು ರಸ್ತೆ ಆಗಬೇಕು ಎಂದು ಕೇಳಿದರೆ ಅದು ಮುಳುಗಡೆಯಾಗುವ ಪ್ರದೇಶ ಎಂದು ಹೇಳುತ್ತಾರೆ. ಸಾಲದ್ದಕ್ಕೆ ಅಲ್ಲಿನವರೊಂದಿಗೆ ಸಂಬಂಧ ಬೆಳಸಬೇಕಾದರೆ ಮುಳುಗಡೆಯಾಗುವ ಪ್ರದೇಶದವರ ಗತಿಯೇನಾಗುತ್ತದೋ ಎಂದು ಹೆದರುತ್ತಾರೆ. ಹೀಗಾಗಿ ಅವರ ಕಷ್ಟ ಹೇಳತೀರದು. ಮುಳುಗಡೆಯಾದಾಗ ಪ್ರಾಣಬಿಡುವುದಕ್ಕೆ ಬದಲಾಗಿ ಈಗಲೇ ಬೆಂಗಳೂರು ನಾಗರಿಕರ ಮುಂದೆ, ವಿಧಾನ ಸೌಧದಲ್ಲಿ ತಮ್ಮ ಗೋಳನ್ನು ಹೇಳಿಕೊಳ್ಳಬೇಕೆಂದಿದ್ದಾರೆ. ಬೆಂಗಳೂರಿನ ನಾಗರೀಕರು ಮತ್ತು ಕಾರ್ಪೊರೇಷನ್ ಸಹ ಈ ಗೋಳನ್ನು ಪರಿಹಾರ ಮಾಡಬೇಕಾದ್ದು ಅಗತ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಉದ್ದೇಶ ಹೇಳಿದ್ದೇನೆ. ನಗರಕ್ಕೆ ಹಳ್ಳಿಮಾಲಾ ನೀರು ಸಾಲದೆ ಬರುತ್ತದೆ. ಆದರಿಂದ ಯಾವ ವಿಧವಾದ ಪ್ರಯೋಜನವೂ ಆಗುವುದಿಲ್ಲ, ಈ ಸಂದರ್ಭದಲ್ಲಿ ಕಾರ್ಪೊರೇಷನ್ ಮೇಯರ್ ಆದ ಶ್ರೀ ಕೃಷ್ಣಯ್ಯರ್‌ರವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರು ಹಿಂದೆ ದೇವಗಂಗೆ ತರಲು ಭಗೀರತ ಪ್ರಯತ್ನಮಾಡಿದ ಹಾಗೆ ಈ ಪಟ್ಟಣಕ್ಕೆ ಕಾವೇರಿ ನೀರು ತರಬೇಕೆಂದು ಭಗೀರತ ಪ್ರಯತ್ನ ಮಾಡುತ್ತಿದ್ದಾರೆ. ಅವರನ್ನು ಅಭಿನವ ಭಗೀರತ ಎಂದು ಉತ್ಸಾಹದಿಂದ ಕರೆಯುತ್ತೇನೆ. ಅವರು ಸಾಧ್ಯವಾದ ಸಾಹಸವನ್ನೆಲ್ಲಾ ಮಾಡಿ ಹಳ್ಳಿಮಾಲಾ ಯೋಜನೆಯಿಂದ ಸಾಕಷ್ಟು ಪ್ರಯೋಜನವಾಗುವುದಿಲ್ಲ ಎಂದು ಯೋಚನೆಮಾಡಿ ಕಾವೇರಿಯಿಂದ ನೀರನ್ನೊದಗಿಸಬೇಕೆಂದು ಒತ್ತಾಯಮಾಡಿದ್ದಾರೆ.

ಅವರನ್ನು ಈಗಿನ ಭಗೀರಥರೆನ್ನಬೇಕು.

2.30 P.M.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ತಾವು ಎಲೆಕ್ಷನ್ ಕಾಲದಲ್ಲಿ ಇದನ್ನು ಒಪ್ಪಿಕೊಂಡಿದ್ದಿರಿ ತಾನೆ ?

ಶ್ರೀ ಟಿ. ಮಾದಯ್ಯಗೌಡ.—"ಈಗ ಒಂದು ಕಮಿಟಿಯನ್ನು ಮಾಡಿದ್ದೇವೆ, ಮೇ ಜೂನ್ ತಿಂಗಳಲ್ಲಿ ಅದೇನು ರಿಪೋರ್ಟ್ ಕೊಡುತ್ತೀರೋ ಅದರ ಮೇಲೆ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ" ಎಂದು ಸರ್ಕಾರದವರು ಹೇಳಿದ್ದಾರೆ. ನಾನೀಗ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ—ತಾವು ಟೆಕ್ನಿಕಲ್ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಈ ವಿಷಯವನ್ನು ತೀರ್ಮಾನ ಮಾಡುವುದಾದರೆ, Human aspectನ್ನು ಮರೆತಂತಾಗುತ್ತದೆ. ನಾಳೆ 10,000 ಪ್ರಜೆಗಳ, ಅಂದರೆ, 2000 ಸಂಸಾರಗಳ ಜೀವನವನ್ನು ಹಾಳುಮಾಡಿದಂತಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಕೇವಲ ಟೆಕ್ನಿಕಲ್ ದೃಷ್ಟಿಯಲ್ಲೇ ಹೋಗುವುದನ್ನು ಬಿಟ್ಟು ಸಾರ್ವಜನಿಕರ ಹಿತದೃಷ್ಟಿಯಿಂದ ಹೋಗಿರಿ. ಈಗ ತಾವು ಹಳ್ಳಿಮಾಲಾಯೋಜನೆಗೆ ಖರ್ಚು ಮಾಡಬೇಕಾಗುವುದು 8–10 ಕೋಟಿ ರೂಪಾಯಿಗಳು. ಅದನ್ನೇ ಖರ್ಚುಮಾಡಿ ಕಾವೇರಿಯಿಂದ ತರುವ ಯೋಚನೆ ಮಾಡಬೇಕು.

ಮತ್ತೊಂದೇನೆಂದರೆ, ಎಷ್ಟು ಹೆಚ್ಚಿಗೆ ಹಣ ಅದಕ್ಕಾಗಿ ಖರ್ಚಾಗುತ್ತದೋ ಅದನ್ನು ಕಾರ್ಪೊರೇಷನ್ನಿನವರು ಕೊಡುತ್ತಾರೆಯೋ ಎಂದು ಕೇಳಬಹುದು. ಈ ಸಂದರ್ಭದಲ್ಲಿ ನಾನು ಬೆಂಗಳೂರಿನ ಮೇಯರ್ ಸಂಗಡ ಮಾತನಾಡಿದಾಗ ಅವರು ಹೇಳಿದ್ದಾರೆ. "ಇದಕ್ಕಾಗಿ ಎಷ್ಟು ಹಣ ಖರ್ಚಾದರೂ ಅದನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆಂದು ನಾವಾಗಲೇ ನಿರ್ಣಯ ಮಾಡಿದ್ದೇವೆ. ಒಂದು ಮಿಲಿಯನ್ ಗ್ಯಾಲನ್‌ಗೆ ಒಂದು ರೂಪಾಯಿಗಳಾದರೂ ಕೊಡುತ್ತೇವೆಂದು ಕಾರ್ಪೊರೇಷನಿನವರು ಒಪ್ಪಿದ್ದಾರೆ" ಎಂದು ತಿಳಿಸಿದರು. ಹೀಗಿರುವಲ್ಲಿ ಸರ್ಕಾರದವರು ಅಂತಃಕರಣಪೂರಿತವಾಗಿ, ಆ ಬಡಜನರ ಮೇಲೆ ಕೃಪೆಯಿಟ್ಟು ಹಾಗೂ ಈ ಪ್ರಾಮುಖ್ಯವಾದ ನಗರದವರಿಗೂ ಅನುಕೂಲವಾಗುವಂತೆ ಒಂದು ಭರವಸೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು, ಈ ಸಭೆಯು ನನ್ನ ಈ ಠರಾವನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ಅದನ್ನು ಸಭೆಯ ಮುಂದಿಡುತ್ತೇನೆ.

† ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಸ್ವಾಮಿ, ಬೆಂಗಳೂರು ನಗರದಲ್ಲಿ ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ನೀರಿನ ಅಭಾವ ಬಹಳ ಜಾಸ್ತಿಯಾಗಿದೆ. ಅದು ಪ್ರತಿಯೊಬ್ಬರಿಗೂ ತಿಳಿದಿರುವ ವಿಚಾರ ಪ್ರತಿದಿನ ನಮ್ಮ ಹೆಣ್ಣುಮಕ್ಕಳು ಕೊಳಾಯಿಯಿಂದ ನೀರನ್ನು ಹೊತ್ತುಕೊಂಡು ಹೋಗುತ್ತಿರುವ ದೃಶ್ಯವನ್ನು ತಾವೆಲ್ಲರೂ ನೋಡಿದ್ದೀರಿ. ಹೀಗಿರುವಲ್ಲಿ ಈದಿನ ನಮ್ಮ ಗೆಳೆಯರಾದ ಮತ್ತು ಹಿರಿಯರಾದ ಟಿ. ಮಾದಯ್ಯಗೌಡರು ಈ ಠರಾವನ್ನು ತಂದಿದ್ದಾರೆ. ಅದೂಕೂಡ ಹಳ್ಳಿಮಾಲಾ ಕ್ಷೇತ್ರದಿಂದ ಚುನಾಯಿತರಾಗಿ ಬಂದು, ನಮ್ಮ ಬೆಂಗಳೂರು ನಗರದ ಉದ್ದೇಶವನ್ನು ತೀರಿಸುವುದಕ್ಕೆ ಪ್ರಯತ್ನ ಪಡುತ್ತಿರುವುದು ಶ್ಲಾಘನೀಯವಾಗಿದೆ.

ಈ ಹಿಂದೆಯೇ ಹೇಳಿದಹಾಗೆ ನಮ್ಮ ಮುಂದೆ ಬೆಂಗಳೂರು ನಗರದ ನೀರಿನ ಸಮಸ್ಯೆ ಒಂದು ಅಸಾಧ್ಯ ಸಮಸ್ಯೆಯಾಗಿದೆ. ಇದನ್ನು ನೀವು ಖಂಡಿತವಾಗಿ ಜಾಗ್ರತೆ ನಿವಾರಿಸಬೇಕಾಗಿದೆ. ಹಾಲಿ ನಮ್ಮ ಮುಂದಿರುವುದು ಮೂರು ಯೋಜನೆಗಳು. ಈ ಹಿಂದೆಯೇ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಮಾತನಾಡಿದಾಗ, ಈಗ ಒಂದು ಕಮಿಟಿ ಏರ್ಪಾಡಾಗಿದೆ, ಮೂರು ಡಿವಿಜನ್‌ಗಳು ಕೆಲಸಮಾಡುತ್ತಿವೆ. ಆ ಕಮಿಟಿಯವರು ಒಂದು ಸ್ಕೀಮನ್ನು ತಯಾರು ಮಾಡುತ್ತಿದ್ದಾರೆ. ಹಳ್ಳಿಮಾಲಾ ಸ್ಕೀಮಿಗೆ 8.8 ಕೋಟಿ ರೂಪಾಯಿಗಳೂ ಖರ್ಚಾಗುವುದಾಗಿ ಸುಮಾರು 33 ಮೈಲಿ ದೂರದಿಂದ ನೀರು ತರಬಹುದಾಗಿದೆಯೆಂತಲೂ, ಇದರಿಂದ ಸುಮಾರು 25 ಮಿಲಿಯನ್ ಗ್ಯಾಲನ್‌ಗಳನ್ನು ದಿನವಹಿ ಬರಮಾಡಿಕೊಳ್ಳಬಹುದೆಂದೂ ತಿಳಿಸಿದ್ದಾರೆ. ಈ ಕೆಲಸವನ್ನು ಕೈಕೊಂಡರೆ, ನನ್ನ ಸ್ನೇಹಿತರು ಹೇಳಿದಹಾಗೆ ಅನೇಕ ಹಳ್ಳಿಗಳು ನೀರಿನಲ್ಲಿ ಮುಳುಗಿಹೋಗುತ್ತವೆ. ಫಲವತ್ತಾದ ವಿಶೇಷ ಪ್ರದೇಶಗಳು ನೀರಿನಲ್ಲಿ ಮುಳುಗಡೆಯಾಗುತ್ತವೆ. ಒಟ್ಟಿನಲ್ಲಿ 10,000 ವ್ಯವಸಾಯಗಾರರ ಕಣ್ಣೀರನ್ನು ನಾವು ಕುಡಿಯಬೇಕಾಗಿ ಬರುತ್ತದೆ. ಅವರ ಕಣ್ಣಿನ ನೀರನ್ನು ನಾವು ಕುಡಿಯುವುದು ನಮಗೇ ಶ್ರೇಯಸ್ಸಲ್ಲ.

ಹಾಗೆಯೇ ಶಿಂಷದ ಯೋಜನೆಯೂ.. ಅದರಿಂದಾದರೆ ಸುಮಾರು ಅರವತ್ತು ಮೈಲಿಯಿಂದ ನೀರನ್ನು ತರಬೇಕಾಗುತ್ತದೆ. ಅದಕ್ಕೂ ಸುಮಾರು 8-9 ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆಂದು ಹೇಳಿದ್ದಾರೆ. ಆದರಿಂದ ಮೂವತ್ತು ಮಿಲಿಯನ್ ಗ್ಯಾಲನ್‌ಗಳು ಸರಬರಾಯಿಯಾಗುತ್ತವೆಂದು ಗೊತ್ತಾಗಿದೆ. ಆದರೆ ಆದರ ಆಗುಹೋಗುಗಳೇನು ? ಅಲ್ಲಿಯೂ ಅನೇಕ ಫಲವತ್ತಾದ ಜಮೀನುಗಳು, ತೋಟಗಳು ಮುಳುಗಡೆಗೆ ಬರುತ್ತವೆ. ಇದರಿಂದಾಗಿ ಆ ಯೋಜನೆಯೂ ಅಷ್ಟು ಆಶಾದಾಯಕವಾಗಿಲ್ಲ. ಅನೇಕ ಫಲವತ್ತಾದ ಜಮೀನುಗಳು ಹೋಗುವುದರಿಂದ ಆ ಜನರ ಗೋಳು ನಮಗೆ ತಟ್ಟದೆ ಇರದು.

ಇನ್ನು ಮೂರನೆಯ ಯೋಜನೆಯಾದ ಕಾವೇರಿ ಯೋಜನೆಯನ್ನು ತೆಗೆದುಕೊಂಡರೆ, ಕಾವೇರಿಯಿಂದ 24" ಕ್ಯಾಸ್ಟ್ ಐರನ್ ಪೈಪನ್ನು ಹಾಕಿ ನೀರನ್ನು ತರುವುದು ಬಹಳ ಅನುಕೂಲ. ಯಾವ ಪ್ರದೇಶವೂ ಮುಳುಗಡೆಯಾಗುವ ಸಂದರ್ಭವಿರುವುದಿಲ್ಲ. ಉದ್ದಕ್ಕೂ ಒಂದು ರಸ್ತೆಯಾದರೆ ಸಾಕು. ಯಾವ ಅಣೆಕಟ್ಟನ್ನೂ ಕಟ್ಟಬೇಕಾಗಿಲ್ಲ. ಕಾರ್ಯತಃ ಮಾಡುವುದಕ್ಕೂ ಹೆಚ್ಚಿನ ಕಷ್ಟವೂ ಇರುವುದಿಲ್ಲ. ಖರ್ಚನ್ನು ತೆಗೆದುಕೊಂಡರೆ ಮೊದಲನೆಯ ಸ್ಟೇಜಿಗೆ ಸುಮಾರು 12.5 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಗೊತ್ತಾಗಿದೆ. ಇದರಿಂದಲೂ ದಿನಕ್ಕೆ 30 ಮಿಲಿಯನ್ ಗ್ಯಾಲನ್ ನೀರು ಬರುವುದಿದೆ. ಬೀಳುವ ಖರ್ಚು ಒಂದು ಸಾವಿರ ಗ್ಯಾಲನ್ನಿಗೆ 1.28 ನಯಾಪೈಸೆಗಳು. ಈ ಅಂಕಿ-ಅಂಶಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳುವುದಾದರೆ ಕಾವೇರಿ ಯೋಜನೆಯನ್ನು ತೆಗೆದುಕೊಳ್ಳುವುದೇ ಒಳ್ಳೆಯದೆಂದು ತೋರುತ್ತದೆ.

ಶ್ರೀ ಜಿ. ವಿ. ಗೌಡ (ಪಾಳ್ಯ).—ಯಾವ ಸ್ಥಳದಿಂದ ತೆಗೆದುಕೊಳ್ಳುವುದು ?

ಶ್ರೀ ಕೆ. ದೇವಯ್ಯ.—ಅದಕ್ಕೆ ನಮ್ಮ ಎಂಜಿನಿಯರುಗಳಿದ್ದಾರೆ. ಅವರು ಸೂಕ್ತವಾದ ಜಾಗವನ್ನು ಹೇಳುತ್ತಾರೆ. ಆಮೇಲೆ ಯಾವ ಯಾವ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾಗಿದೆಯೋ ಅದನ್ನು ಮಾಡಿಕೊಂಡು ಎರಡನೆಯ ಸ್ಟೇಜ್ ತೆಗೆದುಕೊಂಡು ಮೊದಲನೆಯ ಪೈಪಿನ ಮಗ್ಗುಲಲ್ಲೇ 54"ನ ಪೈಪ್ ಹಾಕಿದರೆ, ಸ್ವಲ್ಪ ಖರ್ಚು ಹೆಚ್ಚಾದರೂ, ನೀರು ತರಬಹುದು. ಒಂದು ವೇಳೆ 1924ನೆಯ ಇಸವಿಯ ಮದ್ರಾಸ್ ಮತ್ತು ಮೈಸೂರು ಸರ್ಕಾರಗಳ ನಡುವಿನ ಒಪ್ಪಂದ ಪ್ರಕಾರ 900 cusecs ಒದಗಿಸ

(ಶ್ರೀ ಕೆ. ದೇವಯ್ಯ)

ಬೇಕೆಂದರೂ ಕಣ್ವಾ ನದಿಯಿಂದ ನೀರನ್ನು ಒದಗಿಸುವುದಕ್ಕೆ ಅವಕಾಶವಿದೆಯೆಂದು ಹೇಳಿದ್ದಾರೆ.

ಆದ್ದರಿಂದ ಈ ವಿಚಾರದಲ್ಲಿ ನಾನು ಇನ್ನು ಹೆಚ್ಚು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟು ಮಾತ್ರ ತಿಳಿಸಿದರೆ ಸಾಕು, ಈ ವಿಷಯವನ್ನು ಒತ್ತಾಯಪೂರ್ವಕವಾಗಿ ನಮ್ಮ ಕಾರ್ಪೊರೇಷನ್ನಿನವರು ಪ್ರತಿವರ್ಷವೂ ಕೂಡ ಹೇಳುತ್ತಿದ್ದಾರೆ. ಎಷ್ಟೋ ಠರಾವುಗಳನ್ನು ಮಾಡಿ ಘನಸರ್ಕಾರದವರಿಗೆ ಕಳುಹಿಸಿದ್ದಾರೆ. ಸಾಲದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು ಮೊನ್ನೆ ಸತ್ಕರಿಸಿದಾಗ ಅವರು ಕೊಟ್ಟ ಆಶ್ವಾಸನೆಗೆ ನಾವು ನಮ್ಮ ಮುಖ್ಯಮಂತ್ರಿಗಳನ್ನು ಎಷ್ಟು ಹೊಗಳಿದರೂ ಸಾಲದು. ಅವರು ಭರವಸೆ ಕೊಟ್ಟಿದ್ದಾರೆ. ಖಂಡಿತವಾಗಿ ಕಾವೇರಿ ನದಿಯಿಂದ ನೀರು ತರುವ ಯೋಜನೆಯನ್ನು ಮೈಸೂರು ಸಂಸ್ಥಾನದಲ್ಲಿ ಇಟ್ಟುಕೊಳ್ಳಬೇಕು. ಇದು ನಮ್ಮ ಮುಂದೆ ಬಹಳ ವರ್ಷಗಳಿಂದಲೂ ಇದೆ. ಕಳೆದ ವರ್ಷವೂ ಕಾಂಗ್ರೆಸ್ ಆಫೀಸಿನಲ್ಲಿಯೂ ಕೂಡ ನಮ್ಮ ಮೈಸೂರು ಸಂಸ್ಥಾನದಲ್ಲಿ ನೀರಿನ ಸಮಸ್ಯೆಯ ಬಗ್ಗೆ ಆಗುಹೋಗುಗಳನ್ನು ಅವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಅವರ ಜವಾಬ್ದಾರಿ ಬಹಳ ಮಿಗಿಲಾಗಿದೆ. ಮಂತ್ರಿಗಳು ಪ್ರತಿವರ್ಷವೂ ಈ ಕಾವೇರಿ ನದಿಯಿಂದ ಆದಷ್ಟು ಜಾಗ್ರತೆ ಇಲ್ಲಿಗೆ ನೀರನ್ನು ಒದಗಿಸುವ ಒಂದು ದೊಡ್ಡ ಯೋಜನೆಯನ್ನು ಇಟ್ಟುಕೊಂಡಿದ್ದೇವೆ ಎಂಬುದಾಗಿ ಆ ಮಾತನ್ನು ಪುಷ್ಟೀಕರಿಸುತ್ತಾ ಅನೇಕ ದೊಡ್ಡ ದೊಡ್ಡ ಸಭೆಗಳಲ್ಲಿ ಹೇಳಿದ್ದಾರೆ. ಇದನ್ನು ಖಂಡಿತವಾಗಿ ನೆರವೇರಿಸಿಕೊಡಬೇಕೆಂದು ನಾನು ಲೋಕೋಪಯೋಗಿ ಶಾಖಾ ಮಂತ್ರಿಗಳಿಗೆ ಹೇಳುತ್ತೇನೆ. ಈ ವಿಷಯದಲ್ಲ ಅವರು ಹೆಚಿನ ಗಮನ ಕೊಡಬೇಕೆಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಬೆಂಗಳೂರಿನ ನೀರಿನ ಸಮಸ್ಯೆಯನ್ನು ಜಾಗ್ರತೆಯಾಗಿ ಪರಿಹರಿಸುವುದಕ್ಕೆ ಕಾವೇರಿ ನದಿಯಿಂದ ನೀರನ್ನು ತರಿಸಿಕೊಡುವುದಕ್ಕೆ ಸಿದ್ಧರಾಗುತ್ತಾರೆಂದು ನಾನು ನಂಬಿದ್ದೇನೆ. ಬೆಂಗಳೂರು ನಗರಕ್ಕೆ ಸುಮಾರು 15 ಮಿಲಿಯನ್ ಗ್ಯಾಲನ್ನು ನೀರು ಕೊಡಬೇಕೆಂದು ತಿಪ್ಪಗೊಂಡನಹಳ್ಳಿ ಮೂಲಕ ಒಂದು ಯೋಜನೆಯನ್ನು ಹಿಂದೆಯೇ ಹಾಕಿಕೊಂಡಿದ್ದರೂ ಈಗ ಕಾಲಕ್ಕೆ ಸರಿಯಾಗಿ ಪಂಪುಸೆಟ್ಟುಗಳು ಸರಿಯಾಗಿ ಬಾರದೆ ಅನೇಕ ಈಗಿರತಕ್ಕ ಸಾಮಾನುಗಳು ಕೆಲಸಮಾಡದೆ ಕೇವಲ ಒಂದು ಮಿಲಿಯನ್ ಗ್ಯಾಲನ್ ನೀರೂ ಕೂಡ ಈಗ ಸಿಕ್ಕದೆ ಹೆಚ್ಚಿಗೆ ನೀರಿನ ಅಭಾವವನ್ನು ಜನತೆ ಪ್ರತಿದಿನವೂ ಅನುಭವಿಸುತ್ತಿದ್ದಾರೆ. ಇಂಥಾದ್ದನ್ನು ತಾವು ಖಂಡಿತವಾಗಿ ಗಮನದಲ್ಲಿಡಬೇಕು.

ಮತ್ತೊಂದು ವಿಚಾರ. ತಾವು 1963ನೇ ಡಿಸೆಂಬರ್ ತಿಂಗಳು ಆಖೈರಿನೊಳಗೆ 3ನೇ ಪೈಪ್‌ಲೈನನ್ನು ಹಾಕಿ ಟ್ರಿಪ್ಲಿಕೇಟ್‌ಲೈನ್ ಪೂರ್ತಿಗೊಳಿಸಿ ಬೆಂಗಳೂರು ನಗರಕ್ಕೆ ತಲಾ 22 ಮಿಲಿಯನ್ ಗ್ಯಾಲನ್ ನೀರು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ನನ್ನ ಮನಸ್ಸಿಗೆ ಇದು ಆಗುವುದು ಬಹಳ ಕಷ್ಟವೆಂದು ತೋರುತ್ತದೆ. ಏಕೆಂದರೆ ಇದುವರೆಗೆ ಪಂಪುಸೆಟ್ಟುಗಳಿಗೆ ಆರ್ಡರ್ ಕೊಟ್ಟಿಲ್ಲ. ಇದಕ್ಕೆ ಸರ್ಕಾರದವರು ಟಾಪ್ ಪ್ರಯಾರಿಟಿ ಕೊಡಬೇಕು. ಇಲ್ಲದೇ ಹೋದರೆ ಬೆಂಗಳೂರಿನ ಜನಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವಾಗ ಜೊತೆಗೆ ಬಡಾವಣೆಯೂ ಸಹ ವಿಸ್ತಾರವಾಗುತ್ತಿರುವಾಗ ಖಂಡಿತವಾಗಿ ನೀರಿನ ಆವಶ್ಯಕತೆ ಹೆಚ್ಚಾಗುತ್ತದೆ. ಸುಮಾರು ಬೆಂಗಳೂರಿನ ಹದಿನೈದು ಲಕ್ಷ ಜನಗಳು ಇತ್ತೀಚೆಗೆ ನೀರಿಲ್ಲದೆ ಮನೆ ಮನೆ ತಿರುಗಾಡುತ್ತಿದ್ದಾರೆ. ಈ ಬಗ್ಗೆ ಟೆಕ್ನಿಕಲ್ ಒಪೀನಿಯನ್ ಪಡೆಯುವುದು ಬಹಳ ಮುಖ್ಯ. ಆ ಬಗ್ಗೆ ಸರ್ಕಾರ ಹೆಚ್ಚು ಗಮನಕೊಡಬೇಕಾಗಿದೆ. ಈಗ ಸದ್ಯಕ್ಕೆ ಕಾವೇರಿ ನದಿಯಿಂದ ನೀರನ್ನು ಬೆಂಗಳೂರಿಗೆ ಒದಗಿಸುವುದು ಬಹಳ ಜಾಗ್ರತೆಯಾಗಬೇಕು. ಒಟ್ಟಿನಲ್ಲಿ ನಮ್ಮ ಇಡೀ ಸಂಸ್ಥಾನಕ್ಕೆ ನೀರನ್ನು ಒದಗಿಸಲು, ಹಳ್ಳಿಮಾಲಾ ಅಥವಾ ಷಿಂಷಾ ಅಥವಾ ಕಾವೇರಿ—ಈ 3 ಯೋಜನೆಗಳನ್ನು ಕೂಡಲೇ ಸರ್ಕಾರದವರು ತೆಗೆದುಕೊಂಡು 64″ ಪೈಪು ಲೈನನ್ನು ಹಾಕಬೇಕು. ಇದಕ್ಕಾಗಿ ಕಲ್ಕತ್ತಾದಿಂದ ಕೆಲವು ಪೈಪುಗಳನ್ನು ಅಥವಾ ಪಂಪು ಸೆಟ್ಟುಗಳನ್ನು ತರಿಸಬೇಕಾಗಿದೆ. ಭದ್ರಾವತಿಯಲ್ಲಿ ಸಾಕಷ್ಟು ಪಂಪುಸೆಟ್ಟುಗಳು ಇಲ್ಲದೇ ಇರುವುದರಿಂದ ಅಲ್ಲಿಂದ ಕೊಂಡುಕೊಳ್ಳಬೇಕಾಗಿ ಬರುತ್ತದೆ. ಈ ಬಗ್ಗೆ ಇಂಡಿಯಾ ಸರ್ಕಾರದವರೊಡನೆ ವ್ಯವಹರಿಸಿ ಅವರಿಂದ ಹೆಚ್ಚಿಗೆ ಹಣವನ್ನು ಪಡೆದು ಈಗಿರತಕ್ಕ ನೀರಿನ ಕೊರತೆಯನ್ನು ಜಾಗ್ರತೆ ಪರಿಹಾರ ಮಾಡಲು ಕಾವೇರಿಯಿಂದ ನೀರನ್ನು ತರಿಸುವ ಕಾರ್ಯಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಸರ್ಕಾರಕ್ಕೆ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Before anybody begins to speak I must make the position clear. Two hours were allotted for the consideration of this Resolution and it will expire at 4.22 p.m I would like to know how much time the Hon'ble Minister requires ?

Sri VEERENDRA PATIL (Minister for Public Works).—Half-an-hour only Sir.

Mr. SPEAKER.—The discussion can go upto 3-30 p.m. Sri B. Nanjappa.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ನನ್ನ ಒಂದು ಅರಿಕೆ. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಇತ್ತೀಚೆಗೆ ಹಾಹಾಕಾರವೆದ್ದಿರುವ ನೀರಿನ ಕೊರತೆಯ ವಿಷಯವನ್ನು ಬೇರೆ ಪ್ರದೇಶಗಳಿಂದ ಬೆಂಗಳೂರಿಗೆ ಬಂದು ಇರತಕ್ಕವರ ಅಭಿಪ್ರಾಯವನ್ನು ಕೇಳಬೇಕೇ ಹೊರ್ತು ಸುಮ್ಮನೆ ಬೆಂಗಳೂರಿನಲ್ಲಿಯೇ ಇರುವಂತಹವರ ಅಭಿಪ್ರಾಯ ಕೇಳುವುದು ಅಷ್ಟಾಗಿ ಸರಿಯಲ್ಲ. ಬೆಂಗಳೂರಿನವರನ್ನು ಬಿಟ್ಟು ಬೇರೆ ಪ್ರದೇಶಗಳಿಂದ ಬಂದಿರುವವರ ಅಭಿಪ್ರಾಯವನ್ನು ಈ ಸರ್ಕಾರ ನೀರಿನ ಅಭಾವದ ಬಗ್ಗೆ ಕೇಳಿ ತಿಳಿದುಕೊಂಡಿದ್ದರೆ ಬಹಳ ಚೆನ್ನಾಗಿತ್ತೆಂದು ನನಗೆ ಅನ್ನಿಸುತ್ತದೆ.

Mr. SPEAKER.—That is a bad suggestion for action.

† ಶ್ರೀ ಬಿ. ನಂಜಪ್ಪ (ಕಬ್ಬನ್‌ಪೇಟೆ).—ಅಧ್ಯಕ್ಷರೇ, ಇವತ್ತು ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಟಿ. ಮಾದಯ್ಯಗೌಡರು, ನಮ್ಮ ಮುಂದೆ ಕಾವೇರಿ ನದಿಯಿಂದ ಬೆಂಗಳೂರಿಗೆ ನೀರನ್ನು ಸರಬರಾಜು ಮಾಡುವ ಬಗ್ಗೆ ಒಂದು ನಿರ್ಣಯವನ್ನು ತಂದಿದ್ದಾರೆ. ಇದು ತುಂಬಾ ಒಳ್ಳೆಯ ನಿರ್ಣಯವೆಂದು ತಮಗೆಲ್ಲರಿಗೂ ಗೊತ್ತಿದೆ. ಈಗ್ಗೆ ಸುಮಾರು 2-3 ವರುಷಗಳಿಂದಲೂ ಕಾವೇರಿ ನದಿಯಿಂದ ಬೆಂಗಳೂರಿಗೆ ನೀರನ್ನು ತರುವ ಪ್ರಶ್ನೆ ಬೆಂಗಳೂರು ಕಾರ್ಪೊರೇಷ

ನ್ನಿನಲ್ಲೂ ಚರ್ಚೆಯಾಗುತ್ತಲೇ ಇತ್ತು. ಈ ವಿಚಾರದಲ್ಲಿ ಹಿಂದೆ ನಾನು ಅನೇಕ ವೇಳೆ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಜತ್ತಿಯವರಲ್ಲಿ ಮಾತನಾಡಿದ್ದೇನೆ. ಅವರು ಆಗಲೇ ಒಪ್ಪಿಕೊಂಡಿದ್ದರು. ಶ್ರೀಮಾನ್ ಕಂಠಿಯವರು ಮುಖ್ಯಮಂತ್ರಿಗಳಾಗಿದ್ದಾಗಲೂ ಈ ವಿಷಯವನ್ನು ಒಪ್ಪಿಕೊಂಡಿದ್ದಾರೆ. ಮತ್ತೆ ಈಗ ಮುಖ್ಯಮಂತ್ರಿಗಳಾಗಿರುವ ಶ್ರೀಮಾನ್ ನಿಜಲಿಂಗಪ್ಪನವರೂ ಕೂಡ ಆ ಬಗ್ಗೆ ತಮ್ಮ ಒಪ್ಪಿಗೆಯನ್ನು ಸಹ ಕೊಟ್ಟಿದ್ದಾರೆ. ಏಕೆಂದರೆ ಹಳ್ಳಿಮಾಲಾ ಯೋಜನೆಯಿಂದ ತಾತ್ಕಾಲಿಕವಾಗಿ ಅನುಕೂಲವಾಗುತ್ತದೆಂದು ತಿಳಿದು ಈಗ ಕಾವೇರಿ ನದಿಯಿಂದಲೇ ತಿರುಗಿ ನೀರನ್ನು ತೆಗೆದುಕೊಂಡು ಬರಬೇಕೆಂದು ಎಲ್ಲರೂ ಚರ್ಚೆ ಮಾಡಿದ್ದೇವೆ. ಅದರಿಂದಾಗಿ ಕಾವೇರಿ ನದಿಯಿಂದ ಬೆಂಗಳೂರಿಗೆ ತುಂಬಾ ಅನುಕೂಲವಾಗುತ್ತದೆ. ಅದೂ ಅಲ್ಲದೆ ಮೈಸೂರು ದೇಶಕ್ಕೆ ಬೆಂಗಳೂರು ಮುಖ್ಯ ನಗರ. ಇದು ದಿನೇ ದಿನೇ ವಿಸ್ತೀರ್ಣದಲ್ಲಿ ಜಾಸ್ತಿಯಾಗುತ್ತಿದೆ. ಹಿಂದೆ 35 ಚದುರ ಮೈಲಿಗಳಿದ್ದುದು ಈಗ 75 ಚದುರ ಮೈಲಿಗಳಾಗುತ್ತಿದೆ. ಆದ್ದರಿಂದ ಈಗಲೇ ಈ ಬಗ್ಗೆ ಮುಂದಿನ ವ್ಯವಸ್ಥೆಮಾಡಿ ತಕ್ಕ ಪರಿಹಾರವನ್ನು ನೀಡಬೇಕೆಂದು ನಾನು ಲೋಕೋಪಯೋಗಿ ಶಾಖಾ ಸಚಿವರಿಗೆ ಪ್ರಾರ್ಥನೆ ಮಾಡುತ್ತಿದ್ದೇನೆ. ನಾವು ಈ ತರಹ ಸ್ಕೀಮುಗಳನ್ನು ಜಾಗ್ರತೆ ಕೈಗೊಳ್ಳಬೇಕು. ಸರ್ಕಾರದವರು ಶಿಂಷಾ ಮತ್ತು ಹಳ್ಳಿಮಾಲಾ ಈ ಎರಡು ಯೋಜನೆಗಳನ್ನೂ ಸಹ ಕೈಗೊಳ್ಳಬೇಕೆಂದು ಹೊರಟಿರುವುದು ಸಾಧುವಾದುದು. ಆದರೆ ಈಗ ಕೈಗೊಳ್ಳತಕ್ಕ ಕಾವೇರಿ ನದಿ ಯೋಜನೆಯ ಬಗ್ಗೆ ಮಂತ್ರಿಗಳು ಮುನ್ನುಗ್ಗಿ ಹೆಚ್ಚು ಮುತುವರ್ಜಿ ವಹಿಸಿ ಆ ಕೆಲಸ ಮಾಡಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಾನು ಬೆಂಗಳೂರು ಕಾರ್ಪೊರೇಷನ್ ಮತ್ತು ನಾಗರಿಕರ ಪರವಾಗಿ ಈ ವಿಷಯವನ್ನು ಮಂತ್ರಿಗಳಲ್ಲಿ ಮತ್ತೊಂದು ಸಾರಿ ಬೇಡುತ್ತೇನೆ. ಇದು ಬಹಳ ಮುಖ್ಯವಾದ ವಿಚಾರ. ಮೈಸೂರಿಗೆಲ್ಲಾ ಬೆಂಗಳೂರು ಮುಖ್ಯನಗರ. ವಿಶಾಲ ಮೈಸೂರು ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ನೀರಿನ ತೊಂದರೆ ದಿನೇ ದಿನೇ ಹೆಚ್ಚಾಗುತ್ತಿದೆ. ಬಾವಿಗಳಲ್ಲಿ ಸಾಕಷ್ಟು ನೀರೇ ಇಲ್ಲ. ಕೊಳಾಯಿಗಳಲ್ಲಿ ನೀರೇ ಬರುವುದಿಲ್ಲ. ಅನೇಕರು ಬೋರ್‌ವೆಲ್ಲುಗಳನ್ನು ಹಾಕಿ ನೀರನ್ನು ಪಡೆಯುತ್ತಿದ್ದಾರೆ. ಈ ನೀರಿನ ಅಭಾವ ಈಗ ಹೆಚ್ಚಾಗಿದೆ. ಬೆಂಗಳೂರು ಎಚ್.ಎ.ಎಲ್.ವರೆಗೂ ಹೋಗಿದೆ. ಆದ್ದರಿಂದ ಕೂಡಲೇ ಕಾವೇರಿ ನದಿಯಿಂದ ಬೆಂಗಳೂರಿಗೆ ನೀರನ್ನು ತರುವ ಕಾರ್ಯವನ್ನು ಮಂತ್ರಿಗಳು ಮಾಡಿಸಿಕೊಡುತ್ತಾರೆಂಬುದಾಗಿ ನಾನು ನಂಬಿ ನನಗೆ ಈ ಎರಡು ಮಾತುಗಳನ್ನಾಡಲು ಅಧ್ಯಕ್ಷರು ಈ ಸಂದರ್ಭದಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟುದುದಕ್ಕಾಗಿ ನಾನು ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ-ಉತ್ತರ).—ಅಧ್ಯಕ್ಷರೇ, ಮಾನ್ಯ ಸ್ನೇಹಿತರು ಇದುವರೆಗೆ ಮಾತನಾಡಿದವರೆಲ್ಲರೂ ನೀರಿನ ಅವಶ್ಯಕತೆ ಬಗ್ಗೆ ಮಾತನಾಡಿದ್ದಾರೆ. ಎಲ್ಲರ ಅಭಿಪ್ರಾಯಗಳೂ ಕೂಡ ಕಾವೇರಿ ನದಿಯಿಂದ ಬೆಂಗಳೂರಿಗೆ ನೀರನ್ನು ಒದಗಿಸಬೇಕಾದುದು ಆಗಿದೆ. ಈ ಆಶೆ ಎಲ್ಲರಿಗೂ ಇದೆ. ಆದರೆ ಕೆಲವು ಮಾನ್ಯ ಸದಸ್ಯರುಗಳು ಹೇಳುತ್ತಿರುವಾಗ ನನಗನ್ನಿಸಿತು—ಆಗುವ ಕೆಲಸಕ್ಕೆ ಅಡ್ಡಿ ಬರುತ್ತಿದ್ದಾರಲ್ಲಾ ಎಂಬ ಭಯ ನನಗೆ ಕಂಡುಬಂತು.

ಶ್ರೀ ಎಂ. ಸಿ. ಬಸಪ್ಪ.—ಯಾರು, ಸದಸ್ಯರುಗಳೇ ?

ಶ್ರೀ ಬಿ. ಕೆ. ಪುಟ್ಟಯ್ಯ.—ತಾವು ಹೇಳಿದ ರೀತಿಯಲ್ಲಿ ಎಷ್ಟೋ ನಿಧಾನವಾಗಬಹುದು ಎಂಬ ಭಯ ಇದೆ. ಕಾರಣವೇನೆಂದರೆ, ಅಂಕಿ-ಅಂಶಗಳ ಪ್ರಕಾರ, ಈಗ ವರದಿಮಾಡಿರುವ ಹಾಗೆ ಹಳ್ಳಿಮಾಲಾ ಯೋಜನೆಗೆ 22 ಕೋಟಿ ರೂಪಾಯಿಗಳ ಅಂದಾಜು, ಹಾಗೂ ತಿಪ್ಪಗೊಂಡನಹಳ್ಳಿ ಯೋಜನೆಗೆ 22 ಕೋಟಿ ರೂಪಾಯಿಗಳ ಅಂದಾಜು, ಮತ್ತೆ ಕಾವೇರಿ ನದಿ ಯೋಜನೆಗೆ 24 ಕೋಟಿ ರೂಪಾಯಿಗಳ ಅಂದಾಜು ಎಂಬುದಾಗಿ ಈ ಮೂರು ಸ್ಕೀಮುಗಳು ಈಗಾಗಲೇ ಬಂದಿದ್ದುವು. ಮೊದಲ ಎರಡೂ ಕೂಡ ಮೂರು-ನಾಲ್ಕು ವರ್ಷಗಳಲ್ಲಿ ಆಗುತ್ತವೆ. ಮೂರನೆಯದು, ಕಾವೇರಿ ನದಿಯಿಂದ ನೀರು ಬರಬೇಕಾದರೆ 10 ವರ್ಷಗಳಾಗುತ್ತದೆ ಎನ್ನುವ ಯೋಜನೆಯನ್ನು ನಮ್ಮ ಮುಂದೆ ಇಟ್ಟಿದ್ದರು. ಟೆಕ್ನಿಕಲ್ ಅಭಿಪ್ರಾಯ ಕೂಡ ನಮಗೆ ತಿಳಿದ ಹಾಗೆ ಮೂರು ವರ್ಷಗಳಲ್ಲಿ ಹಳ್ಳಿಮಾಲಾ ಯೋಜನೆಯಿಂದ ಬೆಂಗಳೂರಿಗೆ ನೀರನ್ನು ಬೇಗ ಒದಗಿಸುವ ಅವಕಾಶ ಇದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಅದನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ನಾನು ಅಭಿಪ್ರಾಯಪಡುತ್ತೇನೆ. ಆ ಮೂರು ಯೋಜನೆಗಳಿಗೂ ಕೂಡ ಈ ಸಭೆ ಒಪ್ಪಿಗೆಯನ್ನು ಕೊಟ್ಟಿದೆ ಎಂದು ನಾನು ಭಾವನೆ ಮಾಡುತ್ತೇನೆ. ಶ್ರೀಮಾನ್ ಮಾದಯ್ಯ ಗೌಡರು ಈ ನಿರ್ಣಯವನ್ನು ತಂದಿರುವುದನ್ನು ನೋಡಿದರೆ ಮೂರು ವರ್ಷಗಳ ಯೋಜನೆ ಬೇಕಾಗಿಲ್ಲ, 10 ವರ್ಷಗಳಾದರೂ ಚಿಂತೆಯಿಲ್ಲ, ಕಾವೇರಿ ನದಿಯಿಂದಲೇ ಬೆಂಗಳೂರಿಗೆ ನೀರನ್ನು ಒದಗಿಸಿ ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ವಿಷಯದಲ್ಲಿ ನಾವು ಅಭಿಪ್ರಾಯ ಪಡುವುದೇನೆಂದರೆ ನಿಜವಾಗಿಯೂ ಕೂಡ ಬೆಂಗಳೂರು ನಗರಕ್ಕೆ ಬೇಗ ಯಾವ ಯೋಜನೆಯಿಂದ ನೀರನ್ನು ಒದಗಿಸಬಹುದೋ ಆ ಯೋಜನೆಯ ಕೆಲಸ ಬೇಗ ಆಗಲಿ, ಸರ್ಕಾರದವರು ಅದನ್ನು ಬೇಗ ಇತ್ಯರ್ಥ ಮಾಡಲಿ. ಎನ್ನುವ ಒಂದು ಅಭಿಪ್ರಾಯವನ್ನು ಅವರು ಹೇಳಬೇಕಾಗಿತ್ತು. ಈಗಲೂ ಕೂಡ ಅವಕಾಶವಿದೆ. ಬೆಂಗಳೂರಿಗೆ ಬೇಗ ಯಾವ ಯೋಜನೆಯಿಂದ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಬೇಕು. ಇಲ್ಲದೆ ಹೋದರೆ ಈಗ ಬೆಂಗಳೂರಿನಲ್ಲಿ ಜನಗಳಿಗೆ ಸಿಕ್ಕುತ್ತಿರುವ ಎಂಟು ಗ್ಯಾಲನ್ನೂ ಕೂಡ ಸಿಕ್ಕದೆ ಏಳು ಗ್ಯಾಲನ್ ಅಥವಾ ಆರು ಗ್ಯಾಲನ್ನಿಗೆ ಇಳಿಯಬಹುದು. ಆಮೇಲೆ ಕುಡಿಯುವುದಕ್ಕೆ ನೀರು ಇಲ್ಲದೆ ಹೋಗುತ್ತದೆ. 10 ವರ್ಷಗಳಾದರೂ ಚಿಂತೆಯಿಲ್ಲ ಕಾವೇರಿ ನದಿಯಿಂದಲೇ ಬೆಂಗಳೂರಿಗೆ ನೀರನ್ನು ಒದಗಿಸಿ ಎಂದು ಹೇಳತಕ್ಕದ್ದು ಏನು ತೋರಿಸುತ್ತದೆ ಎಂದರೆ ಅವರು ತಮ್ಮ ಸ್ವಾರ್ಥ ದೃಷ್ಟಿಯಿಂದ ಆ ರೀತಿ ಹೇಳುತ್ತಿದ್ದಾರೆ ಎನ್ನತಕ್ಕದ್ದು ಚೆನ್ನಾಗಿ ಅರ್ಥವಾಗುತ್ತದೆ. ಅವರಿಗೆ ಸಂಬಂಧಪಟ್ಟವರ ಕೆಲವು ಜಮೀನುಗಳು ಹೋಗುತ್ತವೆ ಅದಕ್ಕೋಸ್ಕರ ಮೂರು ವರ್ಷದ ಯೋಜನೆ ಬೇಕಾಗಿಲ್ಲ ಎಂದು ಹೇಳುತ್ತಾರೆ ಎನ್ನುವುದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಇದರಲ್ಲಿ ನನ್ನ ಅಭಿಪ್ರಾಯವೇನೆಂದರೆ, ಬೆಂಗಳೂರಿನ ಜನರಿಗೆ ಬೇಗ ನೀರನ್ನು ಒದಗಿಸಲು ಯಾವ ಕೆಲಸವನ್ನು ಬೇಗ ಮಾಡಬೇಕೋ ಅದನ್ನು ಮೊದಲನೇ ಸ್ಟೇಜಿನಲ್ಲಿ ಮಾಡಬೇಕು. ಎರಡನೇ ಸ್ಟೇಜಿನಲ್ಲಿ ಅದಕ್ಕೆ ಲಿಂಕ್ ಕೊಟ್ಟುಕೊಂಡು ಕಾವೇರಿ ನದಿಯಿಂದ ನೀರನ್ನು ತರುವ ಯೋಜನೆಯನ್ನು ಮಾಡುವುದರಲ್ಲಿ ದುಡ್ಡು ಉಳಿಯುತ್ತದೆ ಕೆಲಸವೂ ಕೂಡ ಬೇಗ ಆಗುತ್ತದೆ ಈ ಎರಡು ದೃಷ್ಟಿಯಿಂದ

(ಶ್ರೀ ಬಿ. ಕೆ. ಪುಟ್ಟಯ್ಯ)

ಟೆಕ್ನೀಷಿಯನ್ಸ್ ತಮ್ಮ ಅಭಿಪ್ರಾಯುನ್ನು ಕೊಟ್ಟಿದ್ದಾರೆ. ಅದಕ್ಕೆ ಒಪ್ಪಿಗೆ ಕೊಡುವುದು ಕ್ಷೇಮ ಎಂದು ನಾನು ಭಾವಿಸುತ್ತೇನೆ.

Sri H. R. KESHAVA MURTHY.—Bangalore has been a Kalyana-nagara from a very long time. It is the hub of our State. It is the Centre of Culture and Civilization. It is where the major portion of our State lives—the enlightened and the intelligentia......

(*Interruptions.*)

Sri H. R. KESHAVA MURTHY.—Major portion of the intelligentia live here.

Mr. SPEAKER.—What he meant was—representatives of the major portion.

Sri H. R. KESHAVA MURTHY.—To Bangalore City, supply of good and healthy water and very delicious water is also very necessary. Any amount spent on the supply of water to Bangalore will not be a waste. It will be welcome. My only request is, in this respect, Government should be given a free hand. It should not be interfered by the middlemen or by the party people—this party or that party, I do not very much mind. And, the concerned Minister also should copy the precedent set up by the Hon'ble Mr. Hanumanthaiya. He was so famous. I think this Minister also will become more famous by bringing water supply to the Bangalore citizens. Personally I do not mind if our Minister brings water supply even from Ganga. Because, it is very essential in the interests of Bangalore City that water should be brought. I will be very happy if even that is done because it will wash off the sins of both the Government and the people alike. I therefore heartily support this resolution.

† **ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).**—ಸ್ವಾಮಿ, ಶ್ರೀಮಾನ್ ಮಾದಯ್ಯ ಗೌಡರು ತಂದಿರತಕ್ಕ ನಿರ್ಣಯವನ್ನು ನೋಡಿದರೆ ಬೆಂಗಳೂರಿಗೆ ನೀರು ಸಪ್ಲೈ ಮಾಡುವುದಕ್ಕೆ ಬದಲಾಗಿ ರಾಮನಗರ ನೀರಿನಲ್ಲಿ ಮುಳುಗಡೆಯಾಗುತ್ತದೆ ಅದನ್ನು ಬಿಡುಗಡೆಮಾಡಿ ಕೊಡಬೇಕು ಎನ್ನುವ ಮೂಲ ಉದ್ದೇಶದಿಂದ ಈ ನಿರ್ಣಯವನ್ನು ಅವರು ಈ ಸಭೆಯ ಮುಂದೆ ತಂದಿದ್ದಾರೆಂದು ನನಗೆ ಕಾಣುತ್ತದೆ. ಬೆಂಗಳೂರಿಗೆ ನೀರು ಸರಬರಾಜು ಮಾಡಬೇಕು ಎನ್ನುವ ಒಂದು ನೆಪವನ್ನು ಹಾಕಿಕೊಂಡು ರಾಮನಗರದ ಜಮೀನನ್ನು ಉಳಿಸಬೇಕು ಎಂದು ಈ ನಿರ್ಣಯವನ್ನು ಈ ಸಂದರ್ಭದಲ್ಲಿ ಈ ಸಭೆಯ ಮುಂದೆ ತಂದಿದ್ದಾರೆ. ಈ ನಿರ್ಣಯವನ್ನು ಈ ಸಭೆಯ ಮುಂದೆ ತರಬೇಕಾದರೆ ಬೆಂಗಳೂರು ನಗರಕ್ಕೆ ಸರಬರಾಜು ಮಾಡುವ ಯೋಜನೆಯಿಂದ ರಾಮನಗರಕ್ಕೆ ಸೇರಿದ ಯಾವ ಯಾವ ಜಮೀನು ಎಷ್ಟೆಷ್ಟು ಮುಳುಗಡೆಯಾಗುತ್ತದೆ ಎಷ್ಟು ಜನಗಳಿಗೆ ಅನಾನುಕೂಲವಾಗುತ್ತದೆ ಎನ್ನತಕ್ಕಂಥ ವಿಷಯಗಳನ್ನು ಹಿರಿಯರಾದ ಶ್ರೀಮಾನ್ ಮಾದಯ್ಯ ಗೌಡರು ಈ ಸಭೆಯ ಮುಂದೆ ಇಟ್ಟಿದ್ದರೆ ಚೆನ್ನಾಗಿತ್ತು ಎಂದು ನನ್ನ ಭಾವನೆ. ಚುನಾವಣೆಯ ಸಂದರ್ಭದಲ್ಲಿ ಅನೇಕ ಜನಗಳಿಗೆ ಈ ರೀತಿ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟು ಬಂದಿದ್ದಾರೆ. ಯಾವ ರೂಪದಲ್ಲಿ ಇದನ್ನು ತಂದರೆ ಒಳ್ಳೆಯದು ಎಂಬುದನ್ನು ಯೋಚನೆ ಮಾಡಿ ಈ ನಿರ್ಣಯವನ್ನು ಈ ಸಭೆಯ ಮುಂದೆ ತಂದಿದ್ದಾರೆ. ಬೆಂಗಳೂರಿನ ಜನಗಳಿಗೆ ನೀರು ಒದಗಿಸಬೇಕು; ಅದರಲ್ಲಿ ಏನೂ ಭಿನ್ನಾಭಿಪ್ರಾಯವಿಲ್ಲ. ಎಷ್ಟೋಸಾರಿ ಕಾರ್ಪೊರೇಷನ್‌ನವರು ಮಂತ್ರಿಗಳಿಗೆ ಔತಣ ಕೂಟವನ್ನು ಏರ್ಪಡಿಸಿದ್ದಾರೆ. ಮಂತ್ರಿಗಳು ಹಣದ ಅಭಾವ ಎಷ್ಟೇ ಇರಲಿ ಗಂಗಾನದಿಯಿಂದ ಯಮುನಾನದಿಯಿಂದ ಬೆಂಗಳೂರಿಗೆ ನೀರನ್ನು ಸರಬರಾಜು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟು ಬಂದಿರುತ್ತಾರೆ. ಈ ನೀರು ಸಪ್ಲೈ ಮಾಡುವುದಕ್ಕೆ ಅನೇಕ ಎಸ್ಟಿಮೇಟುಗಳನ್ನು ಮಾಡಿ ಈ ಎಸ್ಟಿಮೇಟುಗಳಿಗೇ ನಮ್ಮ ದೇಶದ ಹಣವನ್ನೆಲ್ಲಾ ದುರುಪಯೋಗ ಮಾಡುತ್ತಿದ್ದಾರೆ. ಮಂತ್ರಿಗಳು ಹೇಳುವುದು ಮುಖ್ಯವಲ್ಲ. ಇವೊತ್ತಿನ ದಿವಸ ಈ ಯೋಜನೆಗಳನ್ನು ತಯಾರು ಮಾಡುವುದಕ್ಕೆ ಸರ್ಕಾರದವರು ತಜ್ಞರನ್ನು ಇಟ್ಟಿದ್ದಾರೆ. ಬೆಂಗಳೂರಿಗೆ ಯಾವ ರೀತಿ ನೀರನ್ನು ತರಬೇಕು, ಎಷ್ಟು ಹಣ ಖರ್ಚಾಗುತ್ತದೆ ಎಂದು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಇವರು ಏನೇ ಮಾಡಿದರೂ ಕೂಡ ಟೆಕ್ನೀಷಿಯನ್‌ಗಳ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕು. ನಮ್ಮ ದೇಶದಲ್ಲ ಟೆಕ್ನೀಷಿಯನ್ ಇರುವುದು ಏತಕ್ಕೆ? ಅವರಿಗೆ ಸಂಬಳ ಕೊಟ್ಟು ಅವರನ್ನು ಇಟ್ಟಿರುವುದು ಏತಕ್ಕೆ? ಅವರ ಅಭಿಪ್ರಾಯ ತೆಗೆದುಕೊಂಡು ಅದಕ್ಕೆ ಮನ್ನಣೆ ಕೊಡಬೇಕು, ನಮ್ಮ ಹಿರಿಯರಾದ ಶ್ರೀಮಾನ್ ಮಾದಯ್ಯ ಗೌಡರು ಆ ರೀತಿ ಹೇಳಿದರೆ ಹೇಗೆ? ಹಿಂದೆ ಒಂದು ಸಾರಿ ಶ್ರೀಮಾನ್ ಹನುಮಂತಯ್ಯನವರು ಈ ಸಭೆಯಲ್ಲಿ ಒಂದು ವಿಷಯವನ್ನು ಹೇಳಿದ್ದರು. ಅದೇನೆಂದರೆ ಬೆಂಗಳೂರಿನ ನೀರು ಸರಬರಾಜಿನ ಬಗ್ಗೆ ಯಾವ ಯೋಜನೆಗಳನ್ನೂ ಮಾಡುವುದು ಬೇಡ. ಬೆಂಗಳೂರಿನಲ್ಲಿ ಕೊಳವೆಗಳ ಬಾವಿಗಳನ್ನು ತೆಗೆಸಿ ಅದರ ಮುಖಾಂತರ ಬೇಕಾದಷ್ಟು ನೀರನ್ನು ಬೆಂಗಳೂರು ನಗರಕ್ಕೆ ಒದಗಿಸಬಹುದು, ಅನೇಕ ಕಡೆ ಜಮೀನಿಗೆ ನೀರು ಇಲ್ಲದೆ ಇರುವಾಗ ಬೆಂಗಳೂರಿಗೆ ನೀರು ತಂದರೆ ಅದರಿಂದ ಅನೇಕ ರೈತರಿಗೆ ತೊಂದರೆ ಯಾಗುತ್ತದೆ ಎನ್ನುವ ಮಾತನ್ನು ಹೇಳಿದ್ದರು. ಅಂತೂ ಯಾವ ರೀತಿಯಿಂದಲಾದರೂ ಮಾಡಿ ಬೆಂಗಳೂರಿಗೆ ನೀರನ್ನು ಒದಗಿಸಲೇಬೇಕಾಗಿದೆ. ಇಲ್ಲಿ ಒಳ್ಳೊಳ್ಳೆಯ ರಸ್ತೆಗಳಿವೆ. ವಿದ್ಯುಚ್ಛಕ್ತಿಯ ಸೌಕರ್ಯ ಚೆನ್ನಾಗಿದೆ. ಒಳ್ಳೆಯ ಉದ್ಯಾನವನಗಳಿವೆ. ಈ ರೀತಿ ನಾನಾ ಸೌಕರ್ಯಗಳಿರುವುದರಿಂದ ಇಲ್ಲಿ ಜನ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಜೊತೆಗೆ ಹಳ್ಳಿಗಾಡಿನಲ್ಲಿರತಕ್ಕ ಜನಗಳೂ ಸಹ ಬೆಂಗಳೂರಿಗೆ ಬಂದು ಸೇರುತ್ತಿದ್ದಾರೆ. ಅದಕ್ಕೆ ಕಾರಣ ಈಗ ಹಳ್ಳಿಯಲ್ಲಿ ನೀರಿನ ಸೌಕರ್ಯವಿಲ್ಲ, ಬಾವಿಯಲ್ಲಿ

ನೀರನ್ನು ಸೇದಬೇಕು, ವಿದ್ಯುಚ್ಛಕ್ತಿ ಮತ್ತು ಗಸ್ತೆ ಸೌಕರ್ಯವಿಲ್ಲ. ಹೊಲ ಉಳಬೇಕು ಇತ್ಯಾದಿ ಅನೇಕ ವಿಧವಾದಂತ ತೊಂದರೆಗಳು ಹಳ್ಳಿಯಲ್ಲಿ ಇವೆ. ಅಷ್ಟೊಂದು ಕಷ್ಟಪಡುವುದಕ್ಕಿಂತ ಬೆಂಗಳೂರಿಗೆ ಬಂದು ಒಂದು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ಸುಖವಾಗಿ ಬೆಂಗಳೂರಿನಲ್ಲಿ ಜೀವನವನ್ನು ಸಾಗಿಸಬಹುದು. ಇಲ್ಲದೆ ಹೋದರೆ ಒಂದು ಟೋಪಿಯನ್ನು ಹಾಕಿಕೊಂಡು ಬೆಂಗಳೂರಿನಲ್ಲಿ ಸ್ಯೂಟುಗಳನ್ನು ಬದಲಾವಣೆ ಮಾಡಿಸುವುದು, ಏಲಿನೇಷನ್ ಮಾಡಿಸುವುದು ಇತ್ಯಾದಿ ನಾನಾ ಕೆಲಸಗಳನ್ನು ಮಾಡಿಕೊಂಡು ಸುಖವಾಗಿ ಜೀವನ ನಡೆಸಬಹುದು ಎಂದು ಅನೇಕ ಜನ ಹಳ್ಳಿಯವರು ಬೆಂಗಳೂರಿಗೆ ಬಂದು ಸೇರುತ್ತಿದ್ದಾರೆ. ಜನಸಂಖ್ಯೆ ಜಾಸ್ತಿಯಾಗುತ್ತಿದೆ, ಬೆಂಗಳೂರಿಗೆ ನೀರನ್ನು ಒದಗಿಸಲೇಬೇಕು. ಈ ನೀರನ್ನು ಒದಗಿಸತಕ್ಕ ವಿಚಾರದಲ್ಲಿ ತಜ್ಞರು ಏನು ಅಭಿಪ್ರಾಯ ಕೊಟ್ಟಿದ್ದಾರೊ ಆದರಂತೆ ಆದಷ್ಟು ಜಾಗ್ರತೆ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಅದು ಬಿಟ್ಟು ಮಧ್ಯೆ ಪ್ರವೇಶ ಮಾಡಿ ಆದಕ್ಕೆ ಒಂದು ಜಿಜ್ಞಾಸೆಯನ್ನು ತಂದೊಡ್ಡಬಾರದು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now rise for lunch and meet at 3-30 P.M.

The House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair.]

Mr. SPEAKER.—Before we resume the debate I want to say one thing. I had asked the Hon. Minister what time he would require for reply and he said "half-an-hour". I reckoned it back from 4-22 when the time for the debate will expire and fixed the time for speeches. But I forgot one little thing and that is the reply of the mover of the resolution who has got a right of reply. I must not find myself in an awkward situation afterwards. What time will he require for his reply ?

Sri T. MADAIAH GOWDA.—10 minutes.

Mr. SPEAKER.—Then we will go on and continue the debate leaving 10 minutes for the reply of the mover of the resolution.

Sri C. J. MUCKANNAPPA (Sira).—The time may be extended by 5 or 10 minutes.

Mr. SPEAKER.—I can give chance to one or two members to speak. How many members want to participate in the debate ?

Honbl'e members Sri Muckannappa Gopala Gowda and Marullappa rose.

Mr. SPEAKER.—So only 3 members will be given chance, not more than 10 minutes each.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಬೆಂಗಳೂರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾವು ಅನೇಕ ಸಾರಿ ಈ ಸಭೆಯಲ್ಲಿ ಕೇಳಿದ್ದೇವೆ. ಹೊರಗಡೆ ವೇದಿಕೆಗಳ ಮೇಲೆ, ಪತ್ರಿಕೆಗಳಲ್ಲಿ ಬಂದಂಥಾ ಹೇಳಿಕೆಗಳು ಎಲ್ಲಾ ಕೇಳಿದ್ದೇವೆ. ಈ ಸಭೆಯಲ್ಲಿ ಬಂದಾಗ ಬೆಂಗಳೂರಿಗೆ ಕೆಲವರು ಕಣ್ಣೀರು ಅಂದರು ಗಂಗಾನದಿ ನೀರು ಅಂದರು ಕೆಲವರ, ಯಮುನಾ ನದಿ ನೀರು ಅಂದರು ಕೆಲವರು. ತುಂಗಭದ್ರಾನದಿ ನೀರು ಅಂದರು ಕೆಲವರು. ಹೀಗೆ ನಾನಾ ವಿಧವಾದ ಅಭಿಪ್ರಾಯ ಸೂಚಿಸಿದ್ದಾರೆ. ಈ ಸಭೆಯಲ್ಲಿ ಅನೇಕ ಬಾರಿ ಹೇಳಿದ್ದೇವೆ. ಈ ನೀರಿಗೆ ಇಷ್ಟು ಕಷ್ಟವಾಗುತ್ತದೆ; ಕಾರಣವೇನು ? ಬೆಂಗಳೂರಿನ ಪರಿಸ್ಥಿತಿ ಇಷ್ಟು ಹದಗೆಡುವುದಕ್ಕೆ ಎಲ್ಲ ಜನ ಬೆಂಗಳೂರಿಗೆ ಬರುತ್ತಾರೆ ಎಂದು ಶ್ರೀಮಾನ್ ರೇವಣ ಸಿದ್ದಪ್ಪನವರು ಹೇಳಿದರು. ಎಲ್ಲಾ ಕೈಗಾರಿಕೆಗಳನ್ನೂ ಈ ಊರಿನಲ್ಲೇ ಹಾಕಿದ್ದಾರೆ, ಎಲ್ಲಾ ಕಚೇರಿಗಳನ್ನೂ ಇಲ್ಲೇ ತೆರೆದಿದ್ದಾರೆ, ಎಲ್ಲಾ ಕಾಲೇಜುಗಳನ್ನೂ ಈ ಊರಿನಲ್ಲೇ ಇಟ್ಟಿದ್ದಾರೆ, ಎಲ್ಲಾ ವ್ಯವಹಾರ ಈ ಊರಿನಲ್ಲೇ ನಡೆಯುವುದರಿಂದ ಜನ ಬೆಂಗಳೂರಿಗೆ ಸಾಮಾನ್ಯವಾಗಿ ಬರುತ್ತಾರೆ, ನೆಲಸುತ್ತಾರೆ ಎನ್ನುವುದನ್ನು ಯಾರೂ ಕೂಡ ಅಲ್ಲಗಳೆಯುವ ಹಾಗಿಲ್ಲ. ಸಣ್ಣಸಣ್ಣ ಮಕ್ಕಳ ವಿದ್ಯಾಭ್ಯಾಸಕ್ಕೆ ತಂದೆ ತಾಯಿಗಳು ಊರು ಬಿಟ್ಟು ಬಂದು ಇಲ್ಲಿ ಮನೆ ಮಾಡಿಕೊಂಡು ಮಕ್ಕಳ ವಿದ್ಯಾಭ್ಯಾಸ ಮಾಡಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ನಾನು ಸರ್ಕಾರದವರಿಗೆ ಏನು ಹೇಳುತ್ತೇನೆ ಎಂದರೆ, ಪದೇ ಪದೇ ಈ ಸಭೆಯಲ್ಲಿ ಈ ಮಾನ್ಯ ಸಭೆಯ ಅನೇಕ ಜನ ಸದಸ್ಯರು ವಿಕೇಂದ್ರೀಕರಣಮಾಡಿ ಕೈಗಾರಿಕೆಗಳನ್ನು ಬೇರೆ ಬೇರೆ ಭಾಗಗಳಲ್ಲಿ ಹಾಕಿ ಅದರಿಂದ ಈ ಬೆಂಗಳೂರಿನ ಜನಸಂಖ್ಯೆಯು ಒತ್ತಡ ಕಡಿಮೆಯಾಗುತ್ತದೆ, ನೀರಿನ ಉತ್ಕಟಾವಸ್ಥೆಯನ್ನು ಬಗೆಹರಿಸುವುದಕ್ಕೆ ಸಾಧ್ಯ ಎಂದು ಹೇಳಿದರೆ ಸರ್ಕಾರದವರು· ಅದಕ್ಕೆ ಅನೇಕ ತೊಂದರೆಗಳು, ಅವರಿಗಿರತಕ್ಕ ಅನೇಕ ಅಡಚಣೆಗಳನ್ನು ಮುಂದೆ ಒಡ್ಡುತ್ತಾ ಇದ್ದಾರೆ. ವಾಯುಗುಣ ಚೆನ್ನಾಗಿದೆ, ರೈಲ್ವೇ ಸ್ಟೇಷನ್ ಇದೆ, ಬಂದು ಹೋಗುವುದಕ್ಕೆ ಅನುಕೂಲ ಏರೋಡ್ರೋಂ ಇದೆ. ಅದಕ್ಕೆ ಬೇರೆ ಬೇರೆ ಕಡೆ ಮಾಡುವುದಕ್ಕೆ ಸಾಧ್ಯವಿಲ್ಲ. ಬಂದವರೆಲ್ಲಾ ಇಲ್ಲೇನೇ ಇಂಡಸ್ಟ್ರೀ ಪ್ರಾರಂಭ ಮಾಡುತ್ತೇವೆ, ಕೆಲಸ ಕಾರ್ಯ ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತಾರೆ ಎಂಬುದಾಗಿ ಹೇಳುತ್ತಾರೆ. ಸ್ವಾಮಿ, ಈ ದಿನ ಬೆಳಗ್ಗೆ ಒಂದು ಪ್ರಶ್ನೆಗೆ ಉತ್ತರ ಬಂದಿರುವುದನ್ನು ನೋಡಿದರೆ ಇನ್ನು ೧೦-೨೦ ವರ್ಷಗಳಲ್ಲಿ ಬೆಂಗಳೂರು ನಗರ ತುಮಕೂರಿನವರೆಗೂ ಬೆಳೆಯುತ್ತದೆ. ಬೆಳೆದರೆ ಆ ಕಡೆ ೪೦ ಮೈಲಿ, ಈ ಕಡೆ ೪೦ ಮೈಲಿ ಬೆಳೆದು ಕಾವೇರಿ ನದಿಯಿಂದ ನೀರು ತಂದು ಬೆಂಗಳೂರಿಗೆ ಪೂರೈಸಿದರೂ ಸಹ ಸಾಲುವುದಿಲ್ಲ. ಇದನ್ನು ಬಹಳ ದೀರ್ಘವಾಗಿ ಸರ್ಕಾರ ಯೋಚನೆ ಮಾಡಬೇಕು. ಏಕೆಂದರೆ ಇಲ್ಲಿರತಕ್ಕ ಕೈಗಾರಿಕೆಗಳನ್ನು ವಿಕೇಂದ್ರೀಕರಣಮಾಡಿ, ಇಲ್ಲಿರತಕ್ಕ ಅನೇಕ ಆಫೀಸುಗಳು ಬೇರೆ ಬೇರೆ ಭಾಗಗಳಲ್ಲಿ ಇದ್ದರೆ ಇವು ಸರ್ಕಾರದ ಹಿಡಿತಕ್ಕೆ ಸಿಕ್ಕಬಹುದು ಎಂದು ನನ್ನ ಭಾವನೆ. ಶ್ರೀಮಾನ್ ಮಾದಯ್ಯಗೌಡರೇ ಹೇಳಿದ್ದಾರೆ. ನಮ್ಮ ಸ್ನೇಹಿತರು ಈ ಭಾಗದಿಂದ ಮಾತನಾಡಿದ್ದಾರೆ. ಇದ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ರಲ್ಲಿ ರಾಜಕೀಯ ಇದೆ. ಚುನಾವಣೆಯ ಕಾಲದಲ್ಲಿ ಮಾತುಕೊಟ್ಟಿದ್ದೀರಿ. ಅದಕ್ಕೆ ಈ ದಿವಸ ಹಾಗೆ ಮಾತನಾಡುತ್ತಾ ಇದ್ದೀರಿ ಅಂತ ಅವರು ಹೇಳಿದ್ದು ನಿಜ. ಇದನ್ನು ೧೦-೧೫ ವರ್ಷಗಳಿಂದ ಕೇಳುತ್ತಾ ಇದ್ದೇವೆ. ಶ್ರೀಮಾನ್ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ, ಕೆ. ಸಿ. ರೆಡ್ಡಿಯವರ ಮುಖ್ಯ ಮಂತ್ರಿಗಳಾಗಿದ್ದಾಗ, ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ, ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದು ಅಲ್ಲಿಂದಿಳಿದು ತಾವು ಮತ್ತೆ ಮಂತ್ರಿ ಮಂಡಲಕ್ಕೆ ಸೇರುವವರೆಗೂ ಬೆಂಗಳೂರಿಗೆ ನೀರು ಒದಗಿಸಬೇಕು, ಹಳ್ಳಿಮಾಲಾದಿಂದ ಒದಗಿಸಿದರೆ ಬಹಳ ಜನರಿಗೆ ತೊಂದರೆಯಾಗುತ್ತದೆ, ಸಾವಿರಾರು ಜನರು ನಿರ್ಗತಿಕರಾಗುತ್ತಾರೆ. ಆದ್ದರಿಂದ ಅದು ಬೇಡ ಎಂದು ಹೇಳಿ ಈ ಸಭೆಯಲ್ಲಿ ಈ ಕಡೆ, ಆ ಕಡೆ ಎರಡು ಪಕ್ಷದವರೂ ಅಭಿಪ್ರಾಯ ಪಟ್ಟರು. ಆ ರೀತಿ ಅಭಿಪ್ರಾಯ ಪಡುವಾಗ ಈ ವಿಷಯ ೨ ನೇ ಸಾರಿ ಅಲ್ಲ, ೩ ನೇ ಸಾರಿ ಅಲ್ಲ, ನಾಲ್ಕನೇ ಸಾರಿ ಚರ್ಚೆಯಾಗಿದೆ. ಚರ್ಚೆಯಾಗಿ ಅನೇಕ ಸಂದರ್ಭಗಳಲ್ಲಿ ಪ್ರಶ್ನೋತ್ತರಗಳ ಕಾಲದಲ್ಲಿ, ಬಡ್ಜೆಟ್ ಮೇಲೆ ಮಾತನಾಡುತ್ತಾ, ಡಿಮ್ಯಾಂಡ್‌ಗಳ ಮೇಲೆ ಮಾತನಾಡುತ್ತಾ ಹಳ್ಳಿಮಾಲಾ ಅಥವಾ ಕಾವೇರಿಯಿಂದ ನೀರು ಒದಗಿಸುವುದಕ್ಕೆ ಸರ್ಕಾರದವರು ಏನು ಹೇಳುತ್ತಾರೆ ಎಂದರೆ ಶೀಘ್ರವಾಗಿ ನೀರು ಒದಗಿಸಬೇಕಾಗಿದ್ದರೆ ಹಳ್ಳಿಮಾಲಾದಿಂದ ಒದಗಿಸಬೇಕು, long range policy ಆದರೆ ಕಾವೇರಿಯಿಂದ ಒದಗಿಸಬೇಕು. ಆದ್ದರಿಂದ ಶೀಘ್ರವಾಗಿ ಒದಗಿಸಲು ಹಳ್ಳಿಮಾಲಾ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಅದನ್ನು ಯೋಜನೆ ಮಾಡುವುದಕ್ಕೆ 4 ಲಕ್ಷ ರೂಪಾಯಿಗಳ ದುಡ್ಡನ್ನು ಇಟ್ಟುಕೊಂಡಿದ್ದಾರೆ. ಕಾವೇರಿಯಿಂದ ಏನು ತೊಂದರೆಯಾಗುತ್ತದೆ ಎಂಬುದನ್ನು ಈಗ ಸ್ನೇಹಿತರಾದ ರೇವಣ ಸಿದ್ದಪ್ಪನವರು ಹೇಳಿದರು. ತಜ್ಞರು, ಪರಿಣಿತರು ವಿಮರ್ಶೆ ಮಾಡಿದ್ದಾರೆ, ಮಾಡುತ್ತಾ ಇದ್ದಾರೆ. ಹಳ್ಳಿಮಾಲಾದಿಂದ ಆಗತಕ್ಕ ತೊಂದರೆಗಳು ಅವರು ಸರ್ಕಾರದವರಿಗೆ ಕೊಟ್ಟಿರತಕ್ಕ ರಿಪೋರ್ಟ್‌ನಿಂದ ಗೊತ್ತಾಗುತ್ತದೆ, ಎಷ್ಟು ಭೂಮಿ ಮುಳುಗಡೆಯಾಗುತ್ತದೆ, ಎಷ್ಟು ಜನ ನಿರ್ಗತಿಕರಾಗುತ್ತಾರೆ, ಮನೆ ಮಠ ಇಲ್ಲದೆ ಹೋಗುತ್ತಾರೆ ಎಂಬುದನ್ನೆಲ್ಲಾ ಅದರಲ್ಲಿ ತಿಳಿಸುವುದರಿಂದ ಸರ್ಕಾರದವರು ಬೆಂಗಳೂರಿನಲ್ಲಿ ಒತ್ತಡವನ್ನು ಕಡಮೆ ಮಾಡಬೇಕು. ಜನಗಳಿಗೆ ವಾಸಮಾಡುವುದಕ್ಕೆ ಸ್ಥಳ ವಸತಿ ಕೊಡುವುದು, ಕುಡಿಯುವುದಕ್ಕೆ ನೀರು ಇದನ್ನೆಲ್ಲಾ ಕೊಟ್ಟು ಒಂದೇ ಕಡೆ ರಾಸಿ ಹಾಕಿಕೊಂಡು ಬೆಂಗಳೂರು ಅಂದವಾಗಿದೆ, ಕಲ್ಯಾಣನಗರ, ಸುಂದರವಾಗಿದೆ, ಕಾಸ್ಮಾಪಾಲಿಟನ್ ಸಿಟಿ, ಅದಕ್ಕೇ ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡಬೇಕು ಎಂದರೆ ಬೆಂಗಳೂರು ಕಲ್ಯಾಣ ನಗರವನ್ನು ಬೆಳೆಸುವುದಕ್ಕೆ ಖರ್ಚುಮಾಡತಕ್ಕ ಹಣವನ್ನಷ್ಟೇ ಗಮನಿಸದೆ ದೇಶದಲ್ಲಿ ಏನೇನೂ ಕುಡಿಯುವುದಕ್ಕೆ ನೀರಿಲ್ಲದೇಯಿರತಕ್ಕ 6000 ಹಳ್ಳಿಗಳನ್ನು ತಾವು ನೋಡಬೇಕು. ಬೆಂಗಳೂರು ನಗರಕ್ಕೆ ನೀರು ಬೇಡ ಎಂದು ಹೇಳುವುದಿಲ್ಲ. ಅದನ್ನು ಯೋಜನೆ ಮಾಡುವಾಗ ಇನ್ನೂ ದುರ್ಭರ ಪರಿಸ್ಥಿತಿ ಇರುವ ಸನ್ನಿವೇಶವನ್ನು ತೀವ್ರವಾಗಿ ಯೋಚನೆ ಮಾಡಬೇಕು. ಇವತ್ತಿನ ದಿವಸ ಎಚ್.ಎ.ಎಲ್., ಎಚ್.ಎಂ.ಟಿ., ಬಿ.ಇ ಎಲ್. ಇವರುಗಳಿಗೆ ಎಷ್ಟು ನೀರು ಕೊಡುತ್ತಾರೆ, ಸರ್ಕಾರದವರು ತಾವೇ ಸ್ಥಾಪನೆ ಮಾಡಿರತಕ್ಕ ಕೈಗಾರಿಕೆಗಳವರು ಎಷ್ಟು ನೀರು ಉಪಯೋಗಿಸುತ್ತಾರೆ ಎಂಬುದನ್ನು ಲೆಕ್ಕಹಾಕಿ, ಜನಗಳಿಗೆ ಕುಡಿಯುವುದಕ್ಕೆ ನೀರು ಎಷ್ಟು ಬೇಕು ; ಕೈಗಾರಿಕೆಗಳು ದೂರದೂರವಾಗಿದ್ದರೆ ಎಷ್ಟು ಜನರಿಗೆ ಕೆಲಸಕಾರ್ಯಗಳನ್ನು ಒದಗಿಸಬಹುದಾಗಿತ್ತು ತುಮಕೂರಿನಲ್ಲಿ, ರಾಮನಗರದಲ್ಲಿ, ಚನ್ನಪಟ್ಟಣದಲ್ಲಿ, ಹೊಸಕೋಟೆಯಲ್ಲಿ ಹೀಗೆ ಬೆಂಗಳೂರಿನಿಂದ ಸ್ವಲ್ಪ ದೂರವಾಗಿದ್ದಿದ್ದರೆ ಕಂಜೆಷನ್ ನೀಗುವುದಕ್ಕೆ ಸಾಧ್ಯವಿರಲಿಲ್ಲವೇ ; ನೀರಿನ ಅಭಾವ ನೀಗುವುದಕ್ಕೆ ಸಾಧ್ಯವಿರಲಿಲ್ಲವೇ ಎಂದು ಸರ್ಕಾರ ಯೋಚನೆ ಮಾಡಬೇಕಾಗಿತ್ತು. ಸರ್ಕಾರ ಆ ದೆಶೆಯಲ್ಲಿ ಯೋಚನೆ ಮಾಡುತ್ತಾ ಹಳ್ಳಿಮಾಲಾ ಯೋಜನೆಯನ್ನು ಮಾಡಬೇಕೆಂದು ತೀವ್ರವಾಗಿ ಒಂದು ತೀರ್ಮಾನಕ್ಕೆ ಬಂದಿದ್ದರೆ ಅದರಿಂದಾಗತಕ್ಕ ತೊಂದರೆಗಳನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಬೆಂಗಳೂರಿಗೆ ಕುಡಿಯುವ ನೀರನ್ನೊದಗಿಸುವುದಕ್ಕೆ ಹಳ್ಳಿಮಾಲಾ ಯೋಜನೆಯಿಂದಾಗುವ ಕಷ್ಟವನ್ನು ತಿಳಿದು ಕಾವೇರಿಯಿಂದಲೇ ನೀರನ್ನೊದಗಿಸುವುದು ಒಳ್ಳೆಯದೆಂದು ಮೊನ್ನೆ ತಾನೇ ಪಂಡಿತ ನೆಹರೂ ಅವರು ಕಾರ್ಪೊರೇಷನ್ನಿನವರ ಮನವಿಗೆ ಉತ್ತರ ಕೊಟ್ಟಿದ್ದಾರೆ. ದೆಹಲಿಯಲ್ಲಿಯೂ ನೀರಿನ ಕಷ್ಟವಿದೆಯೆಂದು ಹೇಳಿದ್ದಾರೆ. ಕಾವೇರಿಯಿಂದಲೇ ನೀರನ್ನೊದಗಿಸಬೇಕು, ಇದಕ್ಕೆ ಹಣವನ್ನೊದಗಿಸುವ ವಿಚಾರವನ್ನು ತಾವು ದೆಹಲಿಗೆ ಹೋಗಿ ಮಾತನಾಡುವುದಾಗಿ ಹೇಳಿದ್ದಾರೆ. ಆದುದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಬೆಳೆಯುತ್ತಿರುವ ಈ ಪಟ್ಟಣಕ್ಕೆ ನೀರನ್ನೊದಗಿಸುವ ಏರ್ಪಾಡು ಮಾಡಬೇಕು. ಇನ್ನಾದರೂ ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡುವುದಕ್ಕೆ ಸರಿಯಾದ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before I call upon the next speaker, I would like to know the sense of the House. I have already said that the time allotted for this resolution expires at 4-21 P.M. I would like to extend it till 4-45 P.M. I cannot do it myself because the report has been adopted by the House. Is there any member who will move that the time be extended till 4-45 P.M. ?

Sri C. J. MUCKANNAPPA.—I move, Sir, that the time be extended till 4-45 P.M.

Mr. SPEAKER.—I suppose the House agrees that the time be extended till 4-45 P.M.

HON'BLE MEMBERS.—Yes, Sir.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಶ್ರೀಮಾನ್ ಮಾದಯ್ಯ ಗೌಡರು ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯದಲ್ಲಿ ಬೆಂಗಳೂರಿಗೆ ಕಾವೇರಿಯಿಂದಲೇ ಶುದ್ಧವಾದ ಕುಡಿಯುವ ನೀರನ್ನೊದಗಿಸುವ ಬಗ್ಗೆ ಸರ್ಕಾರ ಸೂಕ್ತಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದಾರೆ. ಬೆಂಗಳೂರು ನಗರಕ್ಕೆ ನೀರನ್ನೊದಗಿಸುವುದು ನಿಜವಾಗಿಯೂ ಒಂದು ದೊಡ್ಡ ಸಮಸ್ಯೆಯಾಗಿದೆ. ದಿನೇ ದಿನೇ ಬೆಳೆಯುತ್ತಿರುವ ಈ ನಗರಕ್ಕೆ ಸಧ್ಯಕ್ಕೆ ಸಾಕಾಗುವಷ್ಟು ನೀರನ್ನೊದಗಿಸುವುದರ ಜೊತೆಗೆ, ಇದು ಹಾಗೆಯೇ ಬೆಳೆದರೆ 15-20 ವರ್ಷಗಳ ನಂತರ ಈ

ನಗರ ಯಾವ ಪ್ರಮಾಣದ್ದಾಗಬಹುದೋ ಅದಕ್ಕೂ ನೀರನ್ನೊದಗಿಸುವುದಕ್ಕಾಗಿ ಕ್ರಮಗಳನ್ನು ಯಾವ ರೀತಿ ತೆಗೆದುಕೊಳ್ಳಬೇಕೆಂಬ ಹತ್ತಿರದ ಹಾಗೂ ದೂರದ ದೃಷ್ಟಿ ಇರಬೇಕಾದುದು ಬಹಳ ಅಗತ್ಯ. ಶ್ರೀಮಾನ್ ಮುಕ್ಕಣ್ಣಪ್ಪನವರು ಒಂದು ಮೂಲಭೂತವಾದ ದೃಷ್ಟಿಯ ಕಡೆಗೆ ನಮ್ಮ ಗಮನವನ್ನೆಳೆದಿದ್ದಾರೆ. ಪಟ್ಟಣಗಳು ಹೀಗೆಯೇ ಬೆಳೆಯುವುದಕ್ಕೆ ಅವಕಾಶ ಕೊಡಬೇಕೆ, ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರು ನಗರದಲ್ಲೇ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಟ್ಟು ಹಾಗೆಯೇ ಇದು ಬೆಳೆಯುವುದಕ್ಕೆ ಬಿಡಬೇಕೆ ಅಥವಾ ಈಗಲೇ ಜಾಗರೂಕರಾಗಿದ್ದು ಕೈಗಾರಿಕೆಗಳನ್ನು ಬೇರೆ ಬೇರೆ ಸ್ಥಳಗಳಿಗೆ ಹಾಕಿ ವಿಕೇಂದ್ರೀಕರಣ ತತ್ತ್ವವನ್ನು ಅನುಸರಿಸಬೇಕೇ ಎನ್ನುವ ವಿಷಯದ ಕಡೆಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ನಿಜವಾಗಿಯೂ ಮುಂದುವರಿದ ದೇಶಗಳಲ್ಲಿಯೂ ಈ ಸಮಸ್ಯೆಯ ಬಗ್ಗೆ ಸಾಕಷ್ಟು ಯೋಚನೆ ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ, ಮುಖ್ಯವಾಗಿ ಹಳ್ಳಿಗಳ ದೇಶದಲ್ಲಿ, ಕೃಷಿಯನ್ನವಲಂಬಿಸಿಕೊಂಡಿರುವ ದೇಶದಲ್ಲಿ, ಕೈಗಾರಿಕೆಗಳು ಯಾವ ರೀತಿ ಬೆಳೆಯಬೇಕು, ಪಟ್ಟಣಗಳು ಯಾವ ರೀತಿ ಬೆಳೆಯಬೇಕು, ಎಷ್ಟು ಮಟ್ಟಿಗೆ ಇವುಗಳು ಬೆಳೆಯುವುದಕ್ಕೆ ಬಿಡುವುದು ಹಿತಕರ ಎನ್ನುವುದನ್ನು ಬೆಂಗಳೂರಿಗೆ ನೀರನ್ನೊದಗಿಸುವುದರ ಜೊತೆಗೆ ಸರಕಾರದವರು ಗಮನದಲ್ಲಿಟ್ಟುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀಮಾನ್ ಮಾದಯ್ಯಗೌಡರ ನಿರ್ಣಯ ಎರಡು ಮುಖದ್ದಾಗಿದೆ. ಬೆಂಗಳೂರಿಗೆ ನೀರನ್ನೊದಗಿಸಬೇಕೆಂಬ ಆಕಾಂಕ್ಷೆ ಹೆಚ್ಚಾಗಿದೆ. ಆದರೆ ಈ ಆಸೆಯ ಜೊತೆಗೆ, ತಮ್ಮ ಕ್ಷೇತ್ರಕ್ಕೆ ಸೇರಿರುವ ಸ್ಥಳದಲ್ಲಿ ಹಳ್ಳಿಮಾಲಾಯೋಜನೆಯನ್ನು ತೆಗೆದುಕೊಂಡರೆ ಮುಳುಗಡೆಯಾಗುವ ಜನರು, ಅವರ ಆಸ್ತಿಪಾಸ್ತಿಗಳನ್ನು ಉಳಿಸಬೇಕೆಂಬ ವಿಷಯದಲ್ಲಿ ಕಾತುರರಾಗಿದ್ದಾರೆ.

ಅಧ್ಯಕ್ಷರು.—ಜನರು ಮುಳುಗಡೆಯಾಗುತ್ತಾರೆಯೇ ?

ಶ್ರೀ ಎಸ್. ಗೋಪಾಲಗೌಡ.—ಜನರ ಆಸ್ತಿಪಾಸ್ತಿಗಳು. ಕೆಲವು ಸಂದರ್ಭಗಳಲ್ಲಿ ಅವರೂ ಮುಳುಗಬಹುದು.

ಅದರ ಆಸೆಯನ್ನು ಅರ್ಥಮಾಡಿಕೊಂಡಿದ್ದೇನೆ. ಹೀಗೆಯೇ ಜನರು, ಈ ಯೋಜನೆ ಬೇಡ, ಆ ಯೋಜನೆಯನ್ನು ತೆಗೆದುಕೊಳ್ಳಿ ಎಂದು ಹೇಳುವುದು ಸ್ವಾಭಾವಿಕ. ತಾನು ಬದುಕಿದರೆ ಆಮೇಲೆ ಜಗತ್ತು ಎನ್ನುವುದನ್ನು ಸಾಮಾನ್ಯವಾಗಿ ನಾವು ಕಾಣುತ್ತೇವೆ. ಆದುದರಿಂದ ಒಬ್ಬರು ಮಾನ್ಯ ಸದಸ್ಯರು ಹೇಳಿದ ಹಾಗೆ, ಕೆಲವು ಜನರ ಸ್ವಾರ್ಥ, ಕೆಲವು ಜನರ ಹಿತಕ್ಕಾಗಿ ಮಾಡತಕ್ಕ ಯೋಜನೆ ಇದಲ್ಲ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಇಂಥ ಸಂದರ್ಭದಲ್ಲಿ ಸಂಕುಚಿತ ಸ್ವಾರ್ಥವನ್ನು ಬಿಡಲೇಬೇಕು. ಶರಾವತಿಯನ್ನು ಕಟ್ಟುವಾಗ, ಇದು ಬೇಡ, ಮುಳುಗಡೆಯಾಗುವ ಜಮೀನಿಗೆ ಜನರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ಹೇಳಿ ಕೆಲವರು ವಿರೋಧ ಮಾಡಿದರು. ಆದರೆ ರಾಜ್ಯದ ಹಿತದೃಷ್ಟಿಯಿಂದ ಇದನ್ನು ಕಟ್ಟಬೇಕಾದುದು ಅಗತ್ಯ ಎಂದು ಕಂಡುಬಂದಮೇಲೆ ಅದನ್ನು ಕಟ್ಟುವುದಕ್ಕೆ ಹೊರಡಬೇಕಾಯಿತು. ಹಳ್ಳಿಮಾಲಾಯೋಜನೆಯನ್ನೇ ತೆಗೆದುಕೊಳ್ಳಬೇಕೆಂದು ನಾನು ಹೇಳುವುದಿಲ್ಲ. ಸರ್ವೆ ಮಾಡುವುದಕ್ಕೆ ಸರ್ಕಾರ ನಾಲ್ಕು ಲಕ್ಷ ರೂಪಾಯಿ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಈ ಸರ್ವೆ ಮಾಡುವಾಗ ನಾವು ಕೊಡುವ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿಡುತ್ತಾರೆಂದು ತಿಳಿದುಕೊಂಡಿದ್ದೇನೆ. ಒಂದು ವಿಷಯವೇನೆಂದರೆ, ಈ ಯೋಜನೆಯ ಬಗ್ಗೆ ಅನೇಕ ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಸರಕಾರದ ಮೇಲೆ ಅಥವಾ ಕಾರ್ಪೊರೇಷನ್ ಮೇಲೆ ನಾನು ಆರೋಪ ಮಾಡುವುದಿಲ್ಲ. ಚರ್ಚೆಯಲ್ಲಿ ಕಾಲಹರಣವಾಗುತ್ತಿರುವಾಗ ನಿತ್ಯ ಜೀವನದಲ್ಲಿ ಜನರು ಏನು ಕಷ್ಟವನ್ನನುಭವಿಸುತ್ತಿದ್ದಾರೆಂಬುದನ್ನು ಮರೆಯಬಾರದು. ಪ್ರತಿದಿನವೂ ನೀರಿನ ನಲ್ಲಿಗಳ ಹತ್ತಿರ ಜನ ಶಾಪ ಹಾಕುತ್ತಾರೆ, ನೀರಿಗಾಗಿ ಪರದಾಡುತ್ತಿರುತ್ತಾರೆ ; ಪ್ರತಿದಿನವೂ ಸ್ನಾನಕ್ಕೆ, ಬಳಸುವುದಕ್ಕೆ ನೀರಿಲ್ಲದೆ ಕಷ್ಟಪಡುತ್ತಿರುವುದನ್ನು ನೋಡಿದ್ದೇವೆ ಮತ್ತು ಅನುಭವ ಮಾಡಿದ್ದೇವೆ. ಆದುದರಿಂದ ಯಾವುದೇ ಯೋಜನೆಯಾಗಲಿ, ಅದು ಹತ್ತಾರು ವರ್ಷಗಳಲ್ಲಿ ಕಾರ್ಯಗತವಾಗುತ್ತದೆಯೆಂದು, ಅದಕ್ಕೆ ಭಾರಿ ಅಡಿಪಾಯವನ್ನು ಹಾಕುತ್ತೇವೆಂದು ಹೇಳಿ, ಕೇಂದ್ರದಿಂದ ಅದಕ್ಕೆ ಸಹಾಯ ಬರಬೇಕು, ಇನ್ನೂ ಅದಕ್ಕೆ ಅಗತ್ಯವಾದ ಸಲಕರಣೆಗಳು ಬರಬೇಕು, ಭಾರಿ ಪ್ರಮಾಣದ ಪೈಪ್‌ಗಳು ಉತ್ಪತ್ತಿಯಾಗಬೇಕು ಎಂದು ಯೋಚನೆ ಮಾಡುತ್ತಾ ಕುಳಿತರೆ ಸಾಲದು. ನಿತ್ಯವೂ ಹತ್ತು ಹನ್ನೆರಡು ಲಕ್ಷ ಜನ ಕಷ್ಟಪಡುತ್ತಿರುವುದನ್ನು ಸರ್ಕಾರ ತೀವ್ರವಾಗಿ ಮನಗಾಣಬೇಕು. ಈ ಚರ್ಚೆಯಲ್ಲಿ ಯಾವುದೇ ಅಗತ್ಯವನ್ನು ಪೂರೈಸುವುದಕ್ಕೆ ಸಕಾಲದಲ್ಲಿ ಆಗದೇ ಹೋದರೆ, ಬರಿಯ ಚರ್ಚೆಯಲ್ಲಿಯೇ ಅದು ಪರ್ಯವಸಾನವಾಗುತ್ತದೆ. ಆದುದರಿಂದ ಈ ಕಡೆ ತೀವ್ರಗಮನವನ್ನು ಸರ್ಕಾರ ಕೊಡಬೇಕು. ನಿತ್ಯ ಕಷ್ಟದ ಪರಿಹಾರಕ್ಕೆ ಏನು ಕ್ರಮ ಕೈಕೊಳ್ಳಬೇಕೆಂಬುದನ್ನು ಅವರು ಯೋಚನೆ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ಕಾವೇರಿ ಯೋಜನೆಯನ್ನು ಕೈಕೊಳ್ಳಬೇಕೆ. ಹಳ್ಳಿಮಾಲಾ ಯೋಜನೆಯನ್ನು ಕೈಕೊಳ್ಳಬೇಕೆ ಅಥವಾ ಶಿಂಷಾ ನೀರನ್ನು ಬೆಂಗಳೂರಿಗೆ ತರಬೇಕೆ ಎನ್ನುವ ಬಗ್ಗೆ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರು ಹಾಸ್ಯವಾಗಿ ಸೂಚಿಸಿದ ಹಾಗೆ, ಗಂಗಾ ನದಿಯ ನೀರನ್ನು ತನ್ನಿ ಎಂದು ಹೇಳಿದರು. ಇದರ ಸಾಧ್ಯತೆ, ಹಣಕಾಸು, ಕಾರ್ಯಗತ ಮಾಡುವುದಕ್ಕೆ ಇರುವ ಕಷ್ಟಸುಖ ಇವನ್ನವಲಂಬಿಸುತ್ತದೆ. ಬೆಳೆಯುತ್ತಿರುವ ಈ ನಗರವನ್ನು, ಬೃಹತ್ ಬೆಂಗಳೂರನ್ನೂ ದೃಷ್ಟಿಯಲ್ಲಿಟ್ಟುಕೊಂಡು, ಹೆಚ್ಚು ಮುತುವರ್ಜಿವಹಿಸಿ, ಕೆಲಸವನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇವತ್ತು ಕೆಲಸ ಬೇಗ ಆಗುತ್ತಿಲ್ಲ. ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯಗತಮಾಡಲು ಮೂರರಿಂದ 10 ವರ್ಷಕಾಲ ಹಿಡಿಯುತ್ತಾ ಇದೆ, ಕೆಲವು ವೇಳೆ 20 ವರ್ಷಗಳವರೆಗೂ ಹೋಗುವುದುಂಟು. ಈ ರೀತಿ ಆಗಬಾರದು. ಹಾಗಾಗದಂತೆ ಈ ಸಂದರ್ಭದಲ್ಲಿ ಸರ್ಕಾರ ಮುಂಜಾಗರೂಕತೆ ಕ್ರಮ ಕೈಕೊಳ್ಳುತ್ತದೆಂದು ಭಾವಿಸುತ್ತೇನೆ. ಈಗ ಬೆಂಗಳೂರಿನ ಮುಂದಿನ ಬೆಳವಣಿಗೆಗೆ ಒಂದು ಮಾಸ್ಟರ್ ಪ್ಲಾನ್ ಎಂದು ಹೇಳುವುದನ್ನು ಸರ್ಕಾರದವರು ಸಾಧ್ಯವಾದಮಟ್ಟಿಗೆ ಆದಷ್ಟು ಬೇಗ ತಯಾರಿಸುವುದು ಒಳ್ಳೆಯದು. ಈಗ ಬೆಂಗಳೂರು ನಗರದಲ್ಲಿ ನೀರಿನ ಅಭಾವದ ಜೊತೆಗೆ ಮನೆ ಅಭಾವ ಜಾಸ್ತಿಯಾಗುತ್ತಿರುವುದನ್ನು ನೋಡಿದ್ದೇವೆ. ಈ ದಿವಸ ತಾನೆ ಚರ್ಚೆಮಾಡಿದ ಹಾಗೆ ಲೇಔಟ್, ಸೈಟ್ ಮುಂತಾದವುಗಳ ಸಮಸ್ಯೆ ದಿನೇ ದಿನೇ ಹೆಚ್ಚು ಉಲ್ಬಣವಾಗುತ್ತಿದೆ. ಆದುದರಿಂದ ಇಂಥ ನಗರ ನಿರ್ಮಾಣ ಕಾರ್ಯ, ಇದರ ಭವಿಷ್ಯ ನಿರ್ಧರಿಸಿ

(ಶ್ರೀ ಎಸ್. ಗೋಪಾಲಗೌಡ)

ಬೇಕಾದ ಎಲ್ಲಾ ಸೌಲಭ್ಯಗಳನ್ನೂ ಒದಗಿಸಲು ಮುಂಜಾಗ್ರತೆ ವಹಿಸಿ ತುಂಬಾ ಯೋಜನೆಗಳನ್ನು ಸಿದ್ಧಮಾಡಿಕೊಳ್ಳುವುದು ಒಳ್ಳೆಯದು. ಈ ಸಂದರ್ಭದಲ್ಲಿ ನಿರ್ಣಯವನ್ನು ಶ್ರೀಮಾನ್ ಮಾದಯ್ಯಗೌಡರು ಬಹುಶಃ ವಾಪಸು ತೆಗೆದುಕೊಳ್ಳುತ್ತಾರೆಂದು ಕಾಣುತ್ತದೆ. ಈಗಾಗಲೇ ಚರ್ಚೆಯಿಂದ ವಿಷಯ ಮನದಟ್ಟಾಗಿದೆ. ಒತ್ತಾಯ ಮಾಡುವುದು ತಪ್ಪು, ಆದರೆ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡರೆ ಈ ಚರ್ಚೆ ಇಲ್ಲಿಗೇ ಮುಗಿದು ಕೇವಲ ಚರ್ಚೆಯಲ್ಲೇ ಪರ್ಯವಸಾನವಾದಂತಾಗುತ್ತದೆ. ಇದಕ್ಕೆ ಅವಕಾಶ ಕೊಡದೆ ಸರ್ಕಾರದವರು ಮತ್ತು ಕಾರ್ಪೊರೇಷನ್‌ನವರು ನಾನು ಹೇಳಿದ ಎರಡು ವಿಚಾರಗಳಲ್ಲಿ ಸೂಕ್ತವಾದ ಮತ್ತು ತೀವ್ರವಾದ ಗಮನ ಕೊಡುತ್ತಾರೆಂದು ಆಶಿಸುತ್ತೇನೆ.

†ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ ಅಧ್ಯಕ್ಷರೇ, ನೀರನ್ನು ಒದಗಿಸಬೇಕೆಂಬ ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಬೆಂಗಳೂರಿನಲ್ಲಿ ನೀರಿನ ತೊಂದರೆಯಿರುವುದು ನಿಜವೇ. ಜನರಿಗೆ ತುಂಬಾ ಕಷ್ಟವಾಗಿದೆ ಎಂದು ಮೊನ್ನೆ ನಾಗರತ್ನಮ್ಮನವರು ಹೇಳಿದರು. ಆದರೆ ಇದರಲ್ಲಿ ಒಂದು ವಿಷಯ. ಬೆಂಗಳೂರಿನಲ್ಲಿ ನೀರಿನ ತೊಂದರೆಯಿದೆ, ಒದಗಿಸಬೇಕು ಎಂದು ಒತ್ತಾಯಮಾಡುವುದು ಸ್ವಾಭಾವಿಕ. ಆದರೆ ಬೆಂಗಳೂರಿಗೆ ಕಾವೇರಿ ನದಿಯ ನೀರನ್ನೇ ಒದಗಿಸಬೇಕೆಂದು ಹೇಳುವುದು ಅರ್ಥವಾಗುವುದಿಲ್ಲ. ಎಲ್ಲಿಂದ ನೀರನ್ನು ಒದಗಿಸಬಹುದು, ಎಲ್ಲಿ ಎಷ್ಟು ಸಿಕ್ಕುತ್ತದೆ, ಯಾವ ರೀತಿ ಮಾಡಬೇಕು ಎಂದು ತೀರ್ಮಾನ ಕೈಕೊಳ್ಳಬೇಕಾದವರು ನಮ್ಮ ದೇಶದಲ್ಲಿರುವ ಟೆಕ್ನೀಷಿಯನ್ಸ್. ಬೇರೆ ಕಡೆಯಿಂದ ಕಡಮೆ ವೆಚ್ಚದಲ್ಲಿ ಬಹಳ ನಷ್ಟವಾಗದ ಹಾಗೆ ಒಳ್ಳೆಯ ನೀರನ್ನು ಬೆಂಗಳೂರಿಗೆ ತರಲು ಸಾಧ್ಯವಾಗುವುದಾದರೆ ಕಾವೇರಿ ನೀರೇ ತರಬೇಕೆಂದು ಪದೇ ಪದೇ ಏಕೆ ಒತ್ತಾಯ ಮಾಡಬೇಕು ? ಇಲ್ಲಿರುವ ಇಷ್ಟು ಸದಸ್ಯರ ಪೈಕಿ ಸುಮಾರು ಸೇಕಡ 75 ಮಂದಿ ಹಳ್ಳಿಯಿಂದ ಬಂದಿದ್ದಾರೆ. ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಒಂದು ಬಾವಿ ಇಲ್ಲ, ಶುದ್ಧವಾದ ನೀರಿಲ್ಲ, ಕೊಚ್ಚೆ ನೀರು, ಹಳ್ಳದ ನೀರು, ದನಗಳಿಗೆ ಸ್ನಾನಮಾಡಿಸುವ ಕೆರೆಯ ನೀರು ಕುಡಿಯುತ್ತಾರೆ. ಈ ದಿವಸ ಹಳ್ಳಿಗಳಿಗೆ ಬಾವಿ ಒದಗಿಸಿ ಎಂದರೆ 400 ರೂಪಾಯಿ ಕೊಡಬೇಕೆಂದು ಸರ್ಕಾರ ಹೇಳುತ್ತದೆ. ಹೀಗಾಗಿ ಸರಿಯಾದ ನೀರು ಕುಡಿಯಲು ಸಿಕ್ಕದೆ ಕೆಲವು ಕಡೆ ಹಳ್ಳಿಯವರಿಗೆ ಕ್ಷಯ ಬಂದಿದೆ. ಹೀಗಿರುವಾಗ ಒಂದೇ ಒಂದು ಬಾವಿ ಕೊಡಿ ಎಂದು ಧೈರ್ಯವಾಗಿ ಹೇಳಲು ಯಾರಿಗೂ ಶಕ್ತಿಯಿಲ್ಲ. 12 ಕೋಟಿಯಾಗಲಿ ಅಥವ 20 ಕೋಟಿ ರೂಪಾಯಿ ಖರ್ಚಾಗಲಿ ಕಾವೇರಿಯಿಂದಲೇ ನೀರನ್ನು ತರಬೇಕು ಎಂದು ಬಹುಜನರು ಹೇಳುವುದು ಅರ್ಥವಾಗುವುದಿಲ್ಲ. ನಾನಾದರೂ ಹೇಳುವುದಿಷ್ಟೆ: ನೀರು ಬೇಕು, ಒಳ್ಳೆಯ ನೀರು ಹೆಚ್ಚಾಗಿ ಬೇಕು. ಎಲ್ಲಿಂದ ತರಬೇಕು, ಎಲ್ಲಿ ಎಂಥ ನೀರು ಎಷ್ಟು ದೊರೆಯುತ್ತದೆ ಎಂಬುದನ್ನು ಟೆಕ್ನೀಷಿಯನ್ಸ್‌ಗೆ ಬಿಟ್ಟರೆ ಅದಷ್ಟು ಜಾಗ್ರತೆ ಒಳ್ಳೆಯ ನೀರನ್ನು ಒದಗಿಸಬಹುದು. ಹಾಗೆ ಮಾಡದೆ ಕಾವೇರಿ ನೀರೇಬೇಕೆಂದು ಹೇಳುವುದು ಸರಿಯಲ್ಲ. ಇದರ ಹಿನ್ನೆಲೆಯಲ್ಲಿ ಪೊಲಿಟಿಕಲ್ ಇನ್‌ಫ್ಲೂಯನ್ಸ್ ಅಥವಾ ಇನ್ನೇನೋ ಇದೆ ಎಂದು ಈ ಒತ್ತಾಯದಿಂದ ಅರ್ಥವಾಗುತ್ತದೆ, ಏನನ್ನೋ ಸಾಧಿಸಲು ಪ್ರಯತ್ನವಿರುವಂತೆ ಕಾಣುತ್ತದೆ. ಒಂದು ಪಕ್ಷ ಹಳ್ಳಿಮಾಲಾ ಯೋಜನೆಯಿಂದ ಬಹಳ ನಷ್ಟ, ಮುಳುಗಡೆ ಆಗುವುದರಿಂದ ಇದನ್ನು ಒತ್ತಾಯ ಮಾಡುತ್ತಾರೆಂದು ಹೇಳುವುದಿಲ್ಲ. ಅದರಿಂದ ಬಹಳ ಅನ್ಯಾಯವಾಗುವುದಾದರೆ ಬೇರೆ ಕಡೆಯಿಂದ ಒದಗಿಸಬಹುದು. ಒಟ್ಟಿನಲ್ಲಿ ಬೆಂಗಳೂರಿಗೆ ಕುಡಿಯುವ ನೀರು ಬೇಕು. ಅದನ್ನು ಜಾಗ್ರತೆ ಎಲ್ಲಿಂದ ಸಾಧ್ಯವೋ ಅಲ್ಲಿಂದ ಒದಗಿಸಬೇಕೆಂದು ಒತ್ತಾಯ ಮಾಡಬೇಕೇ ವಿನಾ ಕಾವೇರಿ ನೀರೇ ಒದಗಿಸಬೇಕೆಂದು ಒತ್ತಾಯ ಮಾಡುವುದರಲ್ಲಿ ಅರ್ಥವಿಲ್ಲ. ಅದಷ್ಟು ಬೇಗ ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ನಂಬಿದ್ದೇನೆ.

†ಶ್ರೀಮತಿ ನಾಗರತ್ನಮ್ಮ (ಗಾಂಧಿನಗರ).—ಮಾನ್ಯ ಅಧ್ಯಕ್ಷರೆ, ಬೃಹದಾಕಾರವಾಗಿ ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ ಕಾವೇರಿ ನದಿಯಿಂದಲೇ ನೀರನ್ನು ತರಬೇಕೆಂಬ ಪ್ರಶ್ನೆಯೇನಿದೆ ಅದು ಈಗಿನದಲ್ಲ, ಬಹಳ ದಿವಸಗಳ ಹಿಂದಿನಿಂದ ಇರುವ ಪ್ರಶ್ನೆ. ಈ ವಿಚಾರವಾಗಿ ಅನೇಕ ಮಾನ್ಯ ಸದಸ್ಯರು ಇದುವರೆಗೆ ಮಾತನಾಡಿದ್ದಾರೆ. ಮಾತನಾಡಿದವರಲ್ಲಿ ಕೆಲವರು ಕಾವೇರಿಯಿಂದಲೇ ಏಕೆ ತರಬೇಕು, ಬೇರೆ ಕಡೆಯಿಂದ ಏಕೆ ತರಬಾರದು ಎಂದು ಪ್ರಶ್ನೆ ಮಾಡಿದ್ದಾರೆ. ಇನ್ನು ಕೆಲವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಾನು ನಮ್ಮ ಮಂತ್ರಿಗಳಿಗೆ ಹೇಳುವುದು, ಅವರು ಈ ನಗರದ ನೀರಿನ ಕೊರತೆಯನ್ನು ಅಷ್ಟಾಗಿ ಅರಿತಿಲ್ಲ. ಅವರು ಬಂದು ಇಳಿದುಕೊಳ್ಳುವುದು ಗೆಸ್ಟ್ ಹೌಸಿನಲ್ಲಿ. 24 ಗಂಟೆಯೂ ಪರಿಶುದ್ಧವಾದ ನೀರು ಬರುತ್ತದೆ. ಆದುದರಿಂದ ನೀರಿನ ಅಗತ್ಯ ಅವರಿಗೆ ಅಷ್ಟು ಕಾಣುವುದಿಲ್ಲ. ಪಾಪ, ಅವರಿಗೆ ನಮ್ಮ ಕಷ್ಟ ಹೇಗೆ ಗೊತ್ತಾಗಬೇಕು ! ಇದು ಮಲತಾಯಿ ಭಾವನೆ ವ್ಯಕ್ತಪಡಿಸುತ್ತದೆ. ಬೆಂಗಳೂರಿನ ಜನರ ಕಷ್ಟ ಹೊರಗಿನವರಿಗೆ ಗೊತ್ತಾಗುವುದಿಲ್ಲ. ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ ನೀರನ್ನೊದಗಿಸಿದರೆ ಜನರಿಂದ ಹಣ ವಸೂಲುಮಾಡಿ ಈ ನಗರದ ಮಧ್ಯೆ ಮುಖ್ಯ ಮಂತ್ರಿಗಳ ಪ್ರತಿಮೆಯನ್ನು ಸ್ಥಾಪಿಸುವುದಾಗಿ ಹಿಂದೆ ಹೇಳಿದ್ದೆ. ಆದರೆ ಆಗಿನ ಮುಖ್ಯ ಮಂತ್ರಿಗಳಿಗೆ ಅದು ಬೇಡವೆನಿಸಿತು. ಈಗ ಸಣ್ಣ ವಯಸ್ಸಿನ ಲೋಕೋಪಯೋಗಿ ಇಲಾಖಾ ಮಂತ್ರಿಗಳಿದ್ದಾರೆ. ಅವರು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು. ಇದು ಸಣ್ಣ ಪ್ರಶ್ನೆ, ಜನ ಸಾಮಾನ್ಯರಿಗೆ ಆಗುತ್ತಿರುವ ತೊಂದರೆಯನ್ನು ಬಗೆ ಹರಿಸುವ ಪ್ರಶ್ನೆ.

ಬೇರೆ ಕಡೆಯಿಂದ ಏಕೆ ನೀರನ್ನು ತರಬಾರದು, ಹಾಗೆ ಮಾಡಿದರೆ ಸ್ವಲ್ಪ ಹಣದಲ್ಲೇ ತರಬಹುದು, ಕಾವೇರಿ ಯೋಜನೆಗೇಕೆ 25 ಕೋಟಿ ಖರ್ಚುಮಾಡಬೇಕು ಎಂದು ಕೆಲವರು ಹೇಳಿದರು. 25 ಕೋಟಿ ಖರ್ಚುಮಾಡಿ ಕಾವೇರಿ ನೀರನ್ನು ತಂದರೆ ಅದು ಶಾಶ್ವತವಾಗಿ ಉಳಿಯುವ ಕೆಲಸ. ಹಾಗೆಮಾಡದೆ ಅರ್ಧ ಖರ್ಚುಮಾಡಿ ಬೇರೆ ಕಡೆಯಿಂದ ಒದಗಿಸಿದರೆ ಮತ್ತೆ ಹತ್ತು ವರ್ಷಗಳಾದ ಮೇಲೆ ಪುನಃ ಬೇರೆ ಪ್ರಯತ್ನ ಮಾಡಬೇಕಾಗುತ್ತದೆ. ಇಲ್ಲಿ ಹಾಹಾಕಾರವಿರುವಾಗ ವಿರೋಧ ಪಕ್ಷದ ಸದಸ್ಯರೇಕೆ ಹಳ್ಳಿಯವರಿಗೆ ನೀರಿಲ್ಲವೆಂಬ ಪ್ರಶ್ನೆಯನ್ನು ಈ ಮಧ್ಯೆ ಹೇಳಿದರೋ ಕಾಣೆ. ಅದು ಅಷ್ಟು ಶೋಭಾಯಮಾನವಾಗಿ ಕಾಣುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಹಳ್ಳಿಯಿಂದ ಪಟ್ಟಣ, ದಿಲ್ಲಿ ಎಂಬುದು ನಮಗೂ ಗೊತ್ತಿದೆ. ಕಾವೇರಿಯಿಂದ ಬೆಂಗಳೂರಿಗೆ ನೀರನ್ನು ತರುವಾಗ ದಾರಿಯಲ್ಲಿರುವ ಹಳ್ಳಿಗಳಿಗೂ ಸಹ ಅನುಕೂಲವಾಗುತ್ತದೆ ಎಂದು ದೂರದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಎದುರು ಮನೆಯವರು ಸರಿಗೆ

ಹಾಕಿಕೊಂಡರೆ ಇತರರು ನೋಡಿ ಉರಲು ಹಾಕಿಕೊಳ್ಳುವುದಿಲ್ಲ. ಒಂದು ದೂರದೃಷ್ಟಿ, ಅಭಿಮಾನ ನಮ್ಮ ಮಿತ್ರರಲ್ಲಿರಲಿ ಎಂದು ವಿನಂತಿಮಾಡಿಕೊಳ್ಳುತ್ತೇನೆ.

4-00 P.M.

ಇನ್ನು, ಇದಕ್ಕೆ ಸಂಬಂಧಪಟ್ಟ ನಮ್ಮ ಮಂತ್ರಿಗಳಿದ್ದಾರೆ. ಅವರು ಮನಸ್ಸು ಮಾಡಿದರೆ ಅವರಿಗೇನೂ ಇದು ದೊಡ್ಡ ಕೆಲಸವಲ್ಲ. ಅವರ ಬುದ್ಧಿ ಉಪಯೋಗಿಸಿದರೆ ಎಷ್ಟೋ ಒಳ್ಳೆಯದು ಮಾಡಬಲ್ಲರು. ಒಳ್ಳೆಯ ಬುದ್ಧಿಗೆ ಯಾವಾಗಲೂ ಬೆಲೆಯುಂಟು. ಇದಕ್ಕೆ ಸಂಬಂಧಪಟ್ಟಂತೆ ಒಂದು ಕಥೆಯಿದೆ. ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ಅವನು ನೆರೆಯ ಊರಿನ ರಾಜನನ್ನು ಗೆಲ್ಲಬೇಕೆಂದು ಮನಸ್ಸು ಮಾಡಿದ. ಯುದ್ಧಕ್ಕೆ ಹೋಗುವ ಮುನ್ನ ಒಮ್ಮೆ ತಮ್ಮ ಮಂತ್ರಿಗಳನ್ನು ಕೇಳೋಣವೆಂದು ಹೇಳಿ ತನ್ನ ವಯೋವೃದ್ಧರಾದ ಜ್ಞಾನ ವೃದ್ಧರಾದ ಮಂತ್ರಿಗಳನ್ನು ಕರೆಸಿದ. ಅವರಿಗೆ ತನ್ನ ಮನಸ್ಸಿನ ನಿಶ್ಚಯವನ್ನು ಹೇಳಲು ಅವರು ಸಲಹೆಕೊಟ್ಟರು; ಯುದ್ಧಕ್ಕೆ ಹೋಗುವುದಕ್ಕೆ ಮುಂಚೆ, ಅವರು ಆ ರಾಜನ ಬುದ್ಧಿಯನ್ನು ಪರೀಕ್ಷೆ ಮಾಡೋಣವೆಂದು ಸೂಚಿಸಿ, ಆ ರಾಜನಿಗೆ ಅವನ ಬುದ್ಧಿಯನ್ನು ಕಳುಹಿಸಿಕೊಡಬೇಕೆಂದು ಕಾಗದ ಬರೆಯುವಂತೆ ತಮ್ಮ ದೊರೆಗೆ ನಿವೇದನೆ ಮಾಡಿಕೊಂಡರು. ಅದರಂತೆ ದೊರೆಯು ಕಾಗದವನ್ನು ಬರೆದು ನೆರೆಊರಿನ ರಾಜನಿಗೆ ಇಷ್ಟು ದಿವಸಗಳಲ್ಲಿ ಕಳುಹಿಸಿಕೊಡಬೇಕೆಂದು ಕಳುಹಿಸಿಕೊಟ್ಟನು. ಈ ಕಾಗದವನ್ನು ನೋಡಿದ ಆ ರಾಜನು ಒಮ್ಮೆಯೇ ತನ್ನ ಮಂತ್ರಿಗಳನ್ನು ಕರೆದು ಕೇಳಲು ಯಾರಿಗೂ ಇದಕ್ಕೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಇದಕ್ಕೆ ಏನು ಸೂಚನೆ ಕೊಡಬೇಕೆಂದು ಯಾರೂ ಮುಂದೆ ಬರಲಿಲ್ಲ. ಕೊನೆಗೆ ವೀರೇಂದ್ರ ಪಾಟೀಲರಂಥ ಸಣ್ಣ ವಯಸ್ಸಿನ ಮಂತ್ರಿಗಳಿದ್ದು ತಾವು ಬುದ್ಧಿಯನ್ನು ಕಳುಹಿಸಿ ಕೊಡುವುದಾಗಿಯೂ, ಆದರೆ ಕೆಲವು ಕಾಲದವರೆಗೆ ತಾನು ಎಲ್ಲಿ ಎತ್ತ ಎಂದು ಕೇಳಕೂಡದೆಂತಲೂ ತಿಳಿಸಿದರು; ಅದರಂತೆ ದೊರೆಯೂ ಒಪ್ಪಿದರು. ಅದಾದ ಮೇಲೆ ಮನೆಗೆ ಹಿಂತಿರುಗಿದ ಮಂತ್ರಿಗಳು ತಮ್ಮ ಹಿತ್ತಲಲ್ಲಿ ಕುಂಬಳ ಗಿಡದಲ್ಲಿ ಹೂವಿಗೆ ಅಂಟಿಕೊಂಡಿದ್ದ ಒಂದು ಕಾಯನ್ನು ಎತ್ತಿ ಒಂದು ಗಡಿಗೆಯಲ್ಲಿಟ್ಟು, ಆ ಕಾಯಿ ಗಿಡದಲ್ಲಿಯೇ ಗಡಿಗೆಯ ಗಾತ್ರದವರೆಗೂ ಬೆಳೆಯುವುದಕ್ಕೆ ಬಿಟ್ಟರು. ಕಾಯಿ ದಿನೇ ದಿನೇ ಬೆಳೆದು ಗಡಿಗೆಯನ್ನು ತುಂಬಿಕೊಂಡಿತು. ಆಗ ಅದನ್ನು ಕತ್ತರಿಸಿ ತಮ್ಮ ಬುದ್ಧಿಯನ್ನು ಕಳುಹಿಸಿ ಕೊಟ್ಟಿರುವುದಾಗಿ ಹೇಳಿ ರಾಜು ಹಾಕಿ ಕಳುಹಿಸಿ ಕೊಡುತ್ತಾ ಅದು ಹೇಗೆ ಬೆಳೆಯಿತೆಂಬುದಕ್ಕೆ ಉತ್ತರ ಬರೆಯಬೇಕೆಂದು ಕೇಳಿದರು. ಗಡಿಗೆಯ ಸಮೇತವಾದ ಕುಂಬಳಕಾಯನ್ನು ನೋಡಿ ರಾಜನು ಆಶ್ಚರ್ಯಪಟ್ಟು 'ಬುದ್ಧಿ ಬಂದಿದೆ' ಎಂದು ಉತ್ತರ ಬರೆದು ಕಳುಹಿಸಿ ಕೊಟ್ಟನಂತೆ. ಅದರ ಮೇಲೆ ಮಂತ್ರಿಯ ಬುದ್ಧಿಯನ್ನು ಕಂಡು ಎಲ್ಲರೂ ಮೆಚ್ಚಿದರಂತೆ. ಅದೇ ಪ್ರಕಾರ ನಮ್ಮ ಸಣ್ಣ ಯುವಕ ಮಂತ್ರಿಗಳು ಬಹಳ ಬುದ್ಧಿವಂತರಾಗಿದ್ದಾರೆ. ಅವರು ತಮ್ಮ ಬುದ್ಧಿಯನ್ನು ಉಪಯೋಗಿಸಿ ಕಾವೇರಿ ನದಿಯ ನೀರನ್ನು ಬೆಂಗಳೂರಿಗೆ ತರುವುದಕ್ಕೆ ಸರ್ವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈ ಪ್ರಶ್ನೆ ಹಿಂದೆಯೂ ಈ ಸಭೆಯ ಮುಂದೆ ಬಂದಿತ್ತು. ಆದರೆ ಏನೋ ನೆಪ ಹೇಳಿ ತಳ್ಳಿ ಹಾಕಿದರು. ಈಗ ಬೆಂಗಳೂರು ಜನರು ನೀರಿಗಾಗಿ ಹಾಹಾಕಾರ ಪಡುತ್ತಿದ್ದಾರೆ. ಅವರ ಗೋಳನ್ನು ಕನಿಕರದಿಂದ ಕೇಳಿ, ಈ ಕಾವೇರಿ ನದಿಯ ನೀರನ್ನು ತರುವ ಸೂಚನೆಯನ್ನು ಎಲ್ಲರೂ ಒಪ್ಪಬೇಕೆಂದು ಹೇಳುತ್ತೇನೆ.

†ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಮೇಲೆ ಈ ಸಭೆಯ ಅನೇಕ ಸದಸ್ಯರು ಮಾತನಾಡಿದ್ದಾರೆ. ಬೆಂಗಳೂರಿಗೆ ಆದಷ್ಟು ಬೇಗನೆ ನೀರು ಒದಗಿಸಿಕೊಡುವಂಥ ಸಮಸ್ಯೆಗೆ ಸಂಬಂಧಪಟ್ಟಂತೆ ಒಂದು ಠರಾವನ್ನು ಶ್ರೀಮಾನ್ ಮಾದಯ್ಯಗೌಡರು ತಂದು ಕಾವೇರಿಯಿಂದಲೇ ನೀರು ತರುವ ವ್ಯವಸ್ಥೆ ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಈ ನಿರ್ಣಯದ ಮೇಲೆ ಅನೇಕ ಸದಸ್ಯರು, ಅದರಲ್ಲೂ ಬೆಂಗಳೂರು ನಗರವನ್ನು ಪ್ರತಿನಿಧಿಸುವ ಸದಸ್ಯರು ಕಾವೇರಿಯಿಂದ ನೀರನ್ನು ತರದೆ ಹೋದರೆ ನೀರಿನ ಅಭಾವ ತಪ್ಪುವುದಿಲ್ಲವೆಂದು ಒತ್ತಿ ಒತ್ತಿ ಹೇಳಿದ್ದಾರೆ. ಮತ್ತು ಬೆಂಗಳೂರು ನಗರದ ಹೊರಗಿನಿಂದ ಬಂದಿರುವ ಸದಸ್ಯರು ನೀರು ಕಾವೇರಿಯಿಂದ ಬಂದರೇನು, ಷಿಂಷಾದಿಂದ ಬಂದರೇನು, ನಮಗೆ ಬೇಕಾಗಿರುವುದು ನೀರು, ಎಂದು ಹೇಳಿ ನಮಗೆ ಕಡಿಮೆ ವೆಚ್ಚದಲ್ಲಿ ಆದಷ್ಟು ಬೇಗ ಎಲ್ಲಿಂದ ತರಬಹುದೋ ಅಲ್ಲಿಂದ ತರಬೇಕೆಂಬ ಸಲಹೆಯನ್ನು ಕೊಟ್ಟಿದ್ದಾರೆ. ಇನ್ನು ಕೆಲವರು, ಬೆಂಗಳೂರಿನ ನೀರಿನ ಹಾಹಾಕಾರವಿರುವಾಗ ಅನೇಕ ಜನ, ಸಾವಿರಗಟ್ಟಲೆ ನಲ್ಲಿಯ ಮುಂದೆ ನಿಲ್ಲುತ್ತಿರುವಾಗ ಸರ್ಕಾರ ಏನೂ ಮಾಡಲಾರದೆ ಚರ್ಚೆ ಮಾಡುತ್ತಲೇ ಕಾಲ ಕಳೆಯುತ್ತಿದ್ದಾರೆಂಬ ಧಾಟಿಯಲ್ಲಿ ಹೇಳಿದ್ದಾರೆ.

ಅವರಿಗೆ ನಾನು ಇಷ್ಟು ಹೇಳಬಲ್ಲೆ. ಈ ಪ್ರಶ್ನೆ ಸರ್ಕಾರದ ಗಮನದಲ್ಲಿದೆ. ಅದರ ಬಗ್ಗೆ ಇರತಕ್ಕ ಕಷ್ಟವನ್ನು ಸರ್ಕಾರ ಸಂಪೂರ್ಣವಾಗಿ ಮನಗಂಡಿದೆ. ಯಾವ ರೀತಿಯಿಂದಲೂ ಅನಾದರ, ಅನಾಸಕ್ತಿ ವಹಿಸಿಲ್ಲವೆಂದು ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ. ಆದ್ದರಿಂದ ಈ ಠರಾವಿನ ಮೇಲೆ ಚರ್ಚೆಯೇ ಅನಾವಶ್ಯಕವಾಗಿತ್ತೆಂದು ನಾನು ತಿಳಿದಿದ್ದೆ. ಏಕೆಂದರೆ ನಾನು ಬಡ್ಜೆಟ್ಟಿನ ಮೇಲೆ ಮಾತನಾಡಿದಾಗ ಮಾನ್ಯ ಸದಸ್ಯರುಗಳು ಯಾರೂ ಬೆಂಗಳೂರಿನ Water Supply ವಿಚಾರ ಹೇಳದೆ ಇದ್ದರೂ ನಾನೇ ಹೇಳಿ ಸಂಪೂರ್ಣವಾಗಿ ಎಲ್ಲ ವಿಷಯವನ್ನು ಸ್ಪಷ್ಟಪಡಿಸಿದ್ದೆ. ಅದೂ ಅಲ್ಲದೆ, ಹಳ್ಳಿಗಳಿಂದ ಬಂದಂಥ ಕೆಲವು ಪ್ರತಿನಿಧಿಗಳು ಹನ್ನೆರಡು ಅಥವ ಇಪ್ಪತ್ತು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುವುದಕ್ಕೆ ಹಣ ಒದಗಿಸುವುದು ಅವಶ್ಯಕವೇ ಎಂದು ಹೇಳುತ್ತಿದ್ದಾರೆ. ಇದಕ್ಕೂ ಹೆಚ್ಚಾಗಿ ಹಳ್ಳಿಗಳಲ್ಲಿ ನೀರಿನ ಅವಶ್ಯಕತೆ ಇದೆಯೆಂದು ಸರ್ಕಾರದವರಿಗೆ ಗೊತ್ತಿಲ್ಲವೆ ಎಂದು ಶ್ರೀಮಾನ್ ಮರುಳಪ್ಪನವರು ಹೇಳಿದ್ದಾರೆ.

ಈ ಹೊತ್ತು ಜನ ನಗರದಲ್ಲೇ ಇರಲಿ, ಹಳ್ಳಿಗಾಡಿನಲ್ಲಿಯೇ ಇರಲಿ ಎಲ್ಲರಿಗೂ ನೀರನ್ನೊದಗಿಸುವುದು ಸರ್ಕಾರದವರ ಜವಾಬ್ದಾರಿ. ಈ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಬೇಕೆಂದೇನೂ ಸರ್ಕಾರ ಇಷ್ಟಪಡುತ್ತಿಲ್ಲ. ಇಷ್ಟಪಡುವುದೂ ಇಲ್ಲ. ಶ್ರೀಮಾನ್ ಮರುಳಪ್ಪನವರು ಹೇಳಿದಹಾಗೆ ನಮ್ಮಲ್ಲಿ ಕೆಲವು ಹಳ್ಳಿಗಳ ಪರಿಸ್ಥಿತಿ ಬಹಳ ಕಷ್ಟಕರವಾಗಿದೆಯೆಂಬುದು ಎಲ್ಲರಿಗೂ ಗೊತ್ತಿದೆ. ಸುಮಾರು ಶೇಕಡ 20-25ರಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ. ಅವರು 5-6 ಮೈಲಿಗಳ ದೂರ ಹೋಗಿ ನೀರು

(ಶ್ರೀ ವೀರೇಂದ್ರ ಪಾಟೀಲ್)

ತರಬೇಕಾಗಿದೆ. ಇವತ್ತು ನೀರು ತಂದರೆ ಅದೇ ನೀರನ್ನು 7-8 ದಿವಸಗಳವರೆಗೆ ಇಟ್ಟುಕೊಂಡು, ಸ್ನಾನ ಮಾಡುವಾಗ ಮಂಚದ ಮೇಲೆ ನಿಂತುಕೊಂಡು ನೀರು ಹುಯ್ದುಕೊಂಡು, ಕೆಳಗೆ ಬಿದ್ದ ನೀರನ್ನು ದನಗಳಿಗೆ ಕುಡಿಸುವ ಪರಿಸ್ಥಿತಿ ಇದೆ. ಅದ್ದರಿಂದ ಹಳ್ಳಿಗಳಲ್ಲಿ ನೀರಿನ ಕಷ್ಟವಿಲ್ಲವೆಂದು ನಾನು ಹೇಳುತ್ತಿಲ್ಲ. ಹೀಗೆ ಯಾವ ಯಾವ ಊರುಗಳಲ್ಲಾಗಿದೆ, ಯಾವ ಯಾವ ಊರುಗಳಲ್ಲಿಲ್ಲವೆಂಬುದನ್ನು ನಾನೀಗ ವಿವರವಾಗಿ ಹೇಳುವುದಕ್ಕೆ ಸಿದ್ಧನಾಗಿಲ್ಲ. ಅದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಅವರಿಗೆ ನೀರನ್ನು ಸರಬರಾಯಿ ಮಾಡುವುದು ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ತಿಳಿದಿದ್ದೇನೆ.

ಅದೇರೀತಿ ಬೆಂಗಳೂರು ನಗರದ ವಿಷಯದಲ್ಲಿ ನಮ್ಮ ಲಕ್ಷ್ಯ ತಪ್ಪಿ ನಡೆಯುತ್ತಿದ್ದೇವೆಂದು ಯಾರೂ ಹೇಳುವಂತೆಯೂ ಇಲ್ಲ. ಶ್ರೀಮಾನ್ ಮುಕ್ಕಣ್ಣಪ್ಪ ನವರು, ಬೆಂಗಳೂರು ಇಷ್ಟು ಬೆಳೆಯುವುದಕ್ಕೆ ಏಕೆ ಅವಕಾಶ ಮಾಡಿ ಕೊಟ್ಟಿರಿ? ಅದನ್ನು ಕೊಡದೆ ಹೋಗಿದ್ದರೆ ತಾನೇ ತಾನಾಗಿ ಈ ಸಮಸ್ಯೆ ಬಗೆ ಹರಿಯುತ್ತಿತ್ತು ಎಂದು ಹೇಳಿದರು. ಸರ್ಕಾರದ ಪರವಾಗಿ ನಾನು ಹೇಳುವುದೇನೆಂದರೆ, ಬೆಂಗಳೂರು ನಗರ ಹೀಗೆ ಯಾವ ಕಡೆಯೂ ಇಲ್ಲದೆ ಇಷ್ಟು ಬೆಳೆಯಬೇಕೆಂದು ಸರ್ಕಾರದ ಇಚ್ಛೆಯೇನಲ್ಲ. ಆದರೆ, ಬೇರೆ ಕೆಲವು ಕಾರಣಗಳಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಇದು ಬೆಳೆಯುತ್ತಿದೆ, 1956 ಕ್ಕಿಂತ ಮೊದಲು ಇದು ಹಳೆಯ ಮೈಸೂರಿನ ರಾಜಧಾನಿಯಾಗಿತ್ತು. 1-11-1956ರ ನಂತರ ಹೊಸ ಮೈಸೂರು ನಿರ್ಮಾಣವಾದ ಮೇಲೆ, ಹರಿದು ಹಂಚಿ ಹೋಗಿದ್ದ ಅನೇಕ ಕನ್ನಡ ಭಾಗಗಳು ಒಂದಾದಾಗ ಅನೇಕ ಭಾಗಗಳಿಂದ ಜನರು ಬಂದರು. ಅದೂ ಅಲ್ಲದೆ ಅನೇಕ ಕೈಗಾರಿಕೆಗಳು ಕೂಡ ಹೆಚ್ಚು ಹೆಚ್ಚು ಷುರುವಾದುವು. ಇದರ ಪರಿಣಾಮವಾಗಿ ಬೆಂಗಳೂರು ನಗರದ ಜನಸಂಖ್ಯೆ ಸುಮಾರು 12½ ಲಕ್ಷವಾಗಿದೆ. ಇನ್ನೂ ಬೆಳೆಯಬಹುದು. ಶ್ರೀಮಾನ್ ಮುಕ್ಕಣಪ್ಪನವರು ಹೇಳಿದರು; ಆದಷ್ಟು ಕೈಗಾರಿಕೆಗಳನ್ನು ವಿಕೇಂದ್ರೀಕರಿಸಿ, ಹಳ್ಳಿಗಳಲ್ಲಿ, ಬೇರೆ ಡಿಸ್ಟ್ರಿಕ್ಟ್‌ಗಳಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡಿ ಎಂದು. ಆ ರೀತಿ ಮಾಡುತ್ತಿದ್ದೇವೆ. ಅದೇ ಸರ್ಕಾರದ ನೀತಿಯಾಗಿದೆ. ಆದಷ್ಟು ವಿಕೇಂದ್ರೀಕರಿಸಿ ಹೊರಭಾಗದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ಬರಲಿ, ಅದಕ್ಕೆ ಬೇಕಾದಂಥ ಅನುಕೂಲತೆಗಳನ್ನು ಕೊಡಬೇಕು. ಬೆಂಗಳೂರನ್ನು ಇನ್ನು ಹೆಚ್ಚು ಬೆಳೆಸುವುದು ಬೇಡವೆಂಬುದೇ ಸರ್ಕಾರದ ನೀತಿಯಾಗಿದೆ.

ಆದರೆ ಕೆಲವುಸಲ ಒಂದು ಪ್ರಶ್ನೆ ನಮ್ಮ ಮುಂದೆ ಹೀಗೆ ಬರುತ್ತದೆ. ಒಬ್ಬ ದೊಡ್ಡ ಇಂಡಸ್ಟ್ರಿಯಲಿಸ್ಟ್ ಬರುತ್ತಾನೆ. ಅವನು ಬಂದಾಗ್ಗೆ ಏನೋ ಕೋಟಿಗಟ್ಟಲೆ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡುವುದಕ್ಕೆ ತಯಾರಾಗುತ್ತಾನೆ. ಮತ್ತಾವ ಕಾರಣದಿಂದಲಾದರೂ ಬೆಂಗಳೂರು ನಗರದಲ್ಲಿಯೇ ಅವನಿಗೆ ಆ ಕೈಗಾರಿಕೆಯನ್ನು ಪ್ರಾರಂಭಿಸುವುದಕ್ಕೆ ತಕ್ಕ ಅವಕಾಶವನ್ನು ಮಾಡಿಕೊಟ್ಟರೆ ಆತ ಇಲ್ಲಿಯೇ ಆ ಕೈಗಾರಿಕೆಯನ್ನು ಹಾಕುತ್ತಾನೆ. ಇಲ್ಲದಿದ್ದರೆ ಅವನು ಬೇರೆ ರಾಜ್ಯಕ್ಕೆ ಹೋಗಿ ಅದನ್ನು ಅಲ್ಲಿ ಪ್ರಾರಂಭಿಸುತ್ತಾನೆ. ಪ್ರತಿಯೊಂದು ಸಂಸ್ಥಾನದಲ್ಲೂ ಕೂಡ ತಮ್ಮ ರಾಜ್ಯದ ಅಭಿವೃದ್ಧಿಗಾಗಿ ಹೆಚ್ಚಿನಮಟ್ಟಿಗೆ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುತ್ತಾರೆ. ಅಂತಹ ಪರಿಸ್ಥಿತಿ ಇಲ್ಲಿ ಬಂದಾಗ್ಗೆ ಒಂದು ವೇಳೆ ಸಾಕಷ್ಟು ಅನುಕೂಲತೆಗಳನ್ನು ನಾವು ಅಂತಹವರಿಗೆ ಕೊಡದೇ ಹೋದರೆ ಮತ್ತಾವ ಸಂಸ್ಥಾನದಲ್ಲಾದರೂ ಹೋಗಿ ಆ ಕೈಗಾರಿಕೆಯನ್ನು ಸ್ಥಾಪಿಸುವುದಕ್ಕೆ ಅನುಕೂಲಮಾಡಿ ಕೊಟ್ಟ ಹಾಗಾಗುತ್ತದೆ. ಆಗ ನಾವು ವಿಚಾರಮಾಡಿ ನೋಡಬೇಕಾಗತಕ್ಕ ಪ್ರಸಂಗ ಒದಗುತ್ತದೆ. ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿಗೆ ಅವಕಾಶ ಕೊಡಬಾರದು, ಹೆಚ್ಚು ಪ್ರಮಾಣದಲ್ಲಿ ಒಂದೇಕಡೆ ಅದು ಬೇಕಿಲ್ಲ ಎಂಬುದಾಗಿ ಕೆಲವರು ಹೇಳಿದ್ದಾರೆ. ಅದು ಸಾಧುವಾದುದಲ್ಲ. ಈಗ ಈ ಪ್ರಶ್ನೆ ಯಾವ ರೀತಿ ಇದೆಯೆಂಬುದನ್ನು ನಾನು ಸಂಕ್ಷಿಪ್ತರೂಪದಲ್ಲಿ ತಮ್ಮ ಮುಂದೆ ಇಡುತ್ತೇನೆ. ಇನ್ನು ಕೆಲವು ಮಾನ್ಯ ಸದಸ್ಯರು ಈ ವಿಷಯವನ್ನು ಬರೀ ಚರ್ಚೆ ಮಾಡುತ್ತಿದ್ದೀರಿ, ಜನರ ಕಷ್ಟ ನಿಮಗೆ ತಿಳಿಯುವುದಿಲ್ಲ ಎಂಬುದಾಗಿ ಹೇಳಿದರು. ಆದರ ವಿಷಯವನ್ನೂ ಏನೂ ಹೇಳಲಿಲ್ಲ ಎಂಬ ಅರ್ಥದಲ್ಲಿ ಹೇಳಿದರು. ಬೆಂಗಳೂರು ನೀರಿನ ಸರಬರಾಜು ಬಗ್ಗೆ ಸಂಕ್ಷಿಪ್ತರೂಪದಲ್ಲಿ ಕೆಲವು ವಿಷಯಗಳನ್ನು ತಮ್ಮ ಮುಂದೆ ಹೇಳುತ್ತೇನೆ. ೧೮೯೬ರವರೆಗೂ ಬೆಂಗಳೂರು ಸುತ್ತಮುತ್ತ ಏನು ಕೆರೆಗಳು ಇದ್ದವೋ ಆ ಕೆರೆಗಳಿಂದ ಬೆಂಗಳೂರಿಗೆ ರಾ-ವಾಟರ್‌ಸಪ್ಲೈ ಆಗುತ್ತಿತ್ತು. ಫಿಲ್ಟರ್ಡ್ ವಾಟರ್ ಕೊಡುತ್ತಿರಲಿಲ್ಲ. ಆಗ ಬೆಂಗಳೂರಿನ ಜನಸಂಖ್ಯೆ ಕೇವಲ 1 ಲಕ್ಷ 80 ಸಾವಿರ ಇತ್ತು. ಈಗ ಸುಮಾರು 13 ಲಕ್ಷ ಜನಸಂಖ್ಯೆ ಇದೆ. ೧೮೯೬ರಲ್ಲಿ ಈ ಫಿಲ್ಟರ್ಡ್ ವಾಟರ್ ಹೆಸರುಘಟ್ಟದಿಂದ ಕೊಡುವ ವ್ಯವಸ್ಥೆ ಇತ್ತು. ಸುಮಾರು 2½ ಲಕ್ಷದವರೆಗೂ ಜನಸಂಖ್ಯೆ ಮುಂದೆ ಬೆಳೆದರೂ ನೀರು ಕೊಡುವಂತಹ ವ್ಯವಸ್ಥೆ ಆಗಲೇ ಮಾಡಲಾಯಿತು. ನಂತರ ೧೯೨೬ರಲ್ಲಿ ಸಾಕಷ್ಟು ಮಳೆ ಬಾರದೇ ಇರುವ ಕಾರಣ ಆ ಕೆರೆ ಒಣಗಿ ಹೋಯಿತು. ಸರಿಯಾಗಿ ನೀರು ದೊರಕಲಿಲ್ಲ. ಆಗ ಜನ ಬಹಳ ಕಷ್ಟಪರಿಸ್ಥಿತಿಯಲ್ಲಿದ್ದರು. ಆಗ ಅಂತಹ ಸಣ್ಣ ಕೆರೆ ಬೇಡವೆಂದು ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಆಗಿನ ಸರ್ಕಾರ ಒಂದು ಕಮಿಟಿಯನ್ನು ರಚನೆ ಮಾಡಿ ತಿಪ್ಪಗೊಂಡನಹಳ್ಳಿಯ ಒಂದು ಯೋಜನೆಯನ್ನು ತೆಗೆದುಕೊಂಡರು. ಅದರಿಂದಾಚೆಗೆ ವಾಟರ್ ಪೊಸಿಷನ್ ಸುಮಾರು ಒಬ್ಬನಿಗೆ 11 ಗ್ಯಾಲನ್‌ಗಳಷ್ಟು ನೀರು ಕೊಡುವ ಹಾಗೆ ವ್ಯವಸ್ಥೆ ಆಯಿತು. ಈಗ ನಮಗೆ ಇರುವಂತಹ ಪ್ರಶ್ನೆ ನೀರಿನ ಸರಬರಾಜು ೧೭ ಮಿಲಿಯನ್ ಗ್ಯಾಲನ್ನುಗಳಾಗಬೇಕೆಂಬುದು. ಹೆಸರುಘಟ್ಟದಿಂದ ಬರುವ ನೀರಿನ ಲೆಖ್ಖವನ್ನು ತೆಗೆದುಕೊಂಡರೆ ಇದರಲ್ಲಿ ಕೈಗಾರಿಕೆಗಳಿಗೆ, ತೋಟಗಳಿಗೆ ಮತ್ತು ಎರಡನೆ ಪಾಂಚವಾರ್ಷಿಕ ಯೋಜನೆಯ ಕೈಗಾರಿಕೆಗಳ ಅಭಿವೃದ್ಧಿಗೆ ಸುಮಾರು ನಾಲ್ಕೈದು ಮಿಲಿಯನ್ ಗ್ಯಾಲನ್ನುಗಳಷ್ಟು ನೀರು ಹೋಗುತ್ತದೆ. ಸುಮಾರು ೧೨-೧೩ ಮಿಲಿಯನ್ ಗ್ಯಾಲನ್ನುಗಳ ಮಟ್ಟಿಗೆ ಕುಡಿಯುವುದಕ್ಕೆ ಮಾತ್ರ ಜನರಿಗೆ ಸಿಕ್ಕುತ್ತದೆ. ಹತ್ತು ಅಥವಾ ಹನ್ನೊಂದು ಗ್ಯಾಲನ್ನುಗಳು ಮಾತ್ರ ಜನರಿಗೆ ಕುಡಿಯಲಿಕ್ಕೆ ನೀರು ಸಿಕ್ಕುತ್ತದೆ. ಇದು ಅಂತಹ ಒಳ್ಳೆಯ ಸ್ಥಿತಿಯಲ್ಲ, ಸಮಾಧಾನಕರವಾದ ಸ್ಥಿತಿಯಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಉದಾಹರಣೆಗೆ ೧೯೬೦ರಲ್ಲಿ ಒಂದು ಯೋಜನೆಯನ್ನು ಕೈಗೊಂಡಿದ್ದೇವೆ. ಅದು ಷಾರ್ಟ್‌ಟರ್ಮ್ ಸ್ಕೀಂ. ಹೀಗೆ ಒಂದು ಷಾರ್ಟ್‌ಟರ್ಮ್ ಸ್ಕೀಂ, ಇನ್ನೊಂದು ಲಾಂಗ್‌ಟರ್ಮ್ ಸ್ಕೀಂ. ಈ ಷಾರ್ಟ್‌ಟರ್ಮ್ ಸ್ಕೀಂ ಪ್ರಕಾರ ಈಗಿರುವ ಹೆಸರುಘಟ್ಟದಿಂದ ಮತ್ತು ತಿಪ್ಪಗೊಂಡನಹಳ್ಳಿ ರಿಜರ್‌ವಾಯರ್‌ನಿಂದ ಈಗಿರುವಷ್ಟು 11 ಮಿಲಿಯನ್ ಗ್ಯಾಲನ್ನುಗಳನ್ನು ಹೆಚು

ಮಾಡುವುದಕ್ಕೆ ಸಾಧ್ಯವಿದೆ ಎಂಬ ಅಂದಾಜು ಹಾಕಿ ತಿಪ್ಪಗೊಂಡನಹಳ್ಳಿಯ ಸಲುವಾಗಿ 250 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮತ್ತು ಹೆಸರುಘಟ್ಟದ ಸಲುವಾಗಿ 35 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಈ ರೀತಿ ಒಟ್ಟು 285 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಒಂದು ಯೋಜನೆಯನ್ನು ಕೈಗೊಂಡು ಈಗ ಕೊಡುತ್ತಿರುವ ೧೭ ಮಿಲಿಯನ್ ಗ್ಯಾಲನ್ನಿನಿಂದ ೨೮ ಮಿಲಿಯನ್ ಗ್ಯಾಲನ್‌ವರೆಗೂ ಹೆಚ್ಚಿಸಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದನ್ನು ಕಾರ್ಯಗತ ಮಾಡುತ್ತಿದ್ದೇವೆ. ವೇಗವಾಗಿ ಕೆಲಸಕಾರ್ಯಗಳೂ ಸಹ ನಡೆಯುತ್ತಿವೆ. ಈ ಸಭಾ ಮಾನ್ಯ ಸದಸ್ಯರಿಗೂ ಈ ವಿಷಯ ಗೊತ್ತಿದೆ. ಹೋದಸಲ ಹೇಳಿದಹಾಗೆ ನಮಗೆ ಡೂಪ್ಲಿಕೇಟ್ ಮತ್ತು ಟ್ರಿಪ್ಲಿಕೇಟ್ ಲೈನುಗಳನ್ನೆಲ್ಲಾ ಹಾಕುವುದಕ್ಕೆ ೧೯೬೩ನೇ ಇಸವಿ ಮುಗಿಯುವುದರೊಳಗೆ ಹೊರಗಿನಿಂದ ಪಂಪ್‌ಸೆಟ್ಟುಗಳು ಬರಬೇಕಾಗಿವೆ. ಫಾರಿನ್ ಎಕ್ಸ್‌ಚೇಂಜುಗೋಸ್ಕರ ಕೇಂದ್ರ ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಬರೆದಿದ್ದೇವೆ. ಫಾರಿನ್ ಎಕ್ಸ್‌ಚೇಂಜು ಮತ್ತು ಇಂಪೋರ್ಟ್ ಲೈಸೆನ್ಸ್ ಬಂದಕಾಲಕ್ಕೆ ಸುಮಾರು 28 ಮಿಲಿಯನ್ ಗ್ಯಾಲನ್ ವಾಟರ್‌ಸಪ್ಲೈ ಬೆಂಗಳೂರು ನಗರಕ್ಕೆ ಬರುತ್ತದೆ. ಇದು ಷಾರ್ಟ್ ಟರ್ಮ್ ಪ್ಲಾನು.

ಇನ್ನು ಲಾಂಗ್‌ಟರ್ಮ್ ಪ್ಲಾನು ಏನೆಂದರೆ, ಒಂದು ವಿಷಯವನ್ನು ತಮ್ಮ ಮುಂದೆ ಇಡುತ್ತೇನೆ. 1958ರಲ್ಲಿ ಎಲ್ಲಿಂದ ನೀರು ತರಬೇಕು ಎಂಬ ಪ್ರಶ್ನೆ ಬಂದಾಗ ಇದು ತಾತ್ಕಾಲಿಕವಾಗಿ ಸರಿಹೋಗಬಹುದು ಎಂದು ಅಂದುಕೊಂಡಿದ್ದೆವು. ಇವತ್ತು ಬೆಂಗಳೂರಿನ ಜನಸಂಖ್ಯೆ 12½ ಲಕ್ಷ ಇದೆ. ಇನ್ನು ೨೫ ವರ್ಷಗಳ ನಂತರ ೨೦ ಲಕ್ಷ ವಾಗಬಹುದು. ೫೦ ವರ್ಷಗಳ ನಂತರ ೨೫ ಲಕ್ಷ ವಾಗಬಹುದು. ೭೫ ವರ್ಷಗಳ ನಂತರ ೩೦ ಲಕ್ಷದವರೆಗೂ ಆಗಬಹುದು. ಇದಕ್ಕೂ ಹೆಚ್ಚು ಜನಸಂಖ್ಯೆ ಬೆಳೆಯಲಿಕ್ಕಿಲ್ಲವೆಂದು ನಾವು ಒಂದು ಅಂದಾಜು ಮಾಡಬಹುದು. ಮುಂದೆ ಏನು ಪರಿಸ್ಥಿತಿಯಾಗುತ್ತದೆಯೆಂಬುದನ್ನು ನಾವು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು 35 ವರ್ಷಗಳಿಗೆ ಸಾಕಾಗುವಷ್ಟು ಲಾಂಗ್‌ಟರ್ಮ್ ಪ್ಲಾನ್ ಅಥವಾ ಲಾಂಗ್ ರೇಂಜ್ ಪ್ಲಾನ್ ಎಂಬುದಾಗಿ ಈ ವರ್ಷ ಒಂದು ಯೋಜನೆಯನ್ನು ಕೈಗೊಂಡಿದ್ದೇವೆ. ಪ್ರತಿಯೊಬ್ಬರಿಗೂ ದಿನಕ್ಕೆ ಮೂವತ್ತು ಗ್ಯಾಲನ್ ನೀರು ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈಗ ಸಿಗುವಂತಹ ೧೭ ಗ್ಯಾಲನ್ನುಗಳು, ಮುಂದಿನ ವರ್ಷದ ಅಂತ್ಯದಲ್ಲಿ ೧೧ ಗ್ಯಾಲನ್ನುಗಳು ಹೀಗೆ 28 ಗ್ಯಾಲನ್ನುಗಳ, ಒಟ್ಟು ೬೦ ಮಿಲಿಯನ್ ಗ್ಯಾಲನ್ನುಗಳು. ಹೀಗೆ ಹೊಸ ಹೊಸ ಲಾಂಗ್ ರೇಂಜ್ ಸ್ಕೀಮುಗಳನ್ನು ಹಾಕಿಕೊಂಡಿದ್ದೇವೆ. ಸರ್ಕಾರದ ಮುಂದೆ ಈ ಪ್ರಶ್ನೆ ಬಂದಾಗ ಒಂದು ಅಡ್-ಹಾಕ್ ಕಮಿಟಿ ರಚನೆ ಮಾಡಬೇಕೆಂಬುದಾಗಿ ನಿರ್ಧಾರವಾಯಿತು. ಅಂದಮೇಲೆ ಕಾವೇರಿ ನದಿ ಸ್ಕೀಂ ೧೯೬೫ನೇ ಇಸವಿಯಲ್ಲಿ ಖಂಡಿತವಾಗಿ ಪೂರ್ಣಗೊಳ್ಳುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಹೇಳುತ್ತೇನೆ. ಕಾವೇರಿನದಿ ಸ್ಕೀಂನಿಂದ ೧೯೬೫ನೇ ವರ್ಷಕ್ಕೆ 30 ಲಕ್ಷ ಜನಸಂಖ್ಯೆಯಾದರೂ ಕೂಡ ಸಾಕಷ್ಟು ನೀರು ಒದಗಿಸಬೇಕು ಎಂಬುದಾಗಿ ಇವತ್ತು ಒಂದು ಲಾಂಗ್‌ರೇಂಜ್ ಪ್ಲಾನನ್ನು ಹಾಕಿಕೊಂಡಿದ್ದೇವೆ. ಆದರೆ ೧೯೬೫ನೇ ಇಸವಿಯಲ್ಲಿ ಕಾವೇರಿ ನದಿಯ ಸ್ಕೀಂ ಮುಗಿಯುತ್ತದೆಯೆಂದೇನೂ ಇಲ್ಲ. ಮುಖ್ಯವಾಗಿ ೩೫ ವರ್ಷಗಳಲ್ಲಿ ನೀರಿನ ಅಭಾವ ಆಗಬಾರದು ಎಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆ ಪ್ರಕಾರ ನಾವು ಈಗ ಒಂದು ಅಡ್-ಹಾಕ್ ಕಮಿಟಿಯನ್ನು ರಚನೆ ಮಾಡಿದ್ದೇವೆ. ಇದರಲ್ಲಿ ಕಾರ್ಪೊರೇಷನ್ ಇಂಜನಿಯರ್, ಕಾರ್ಪೊರೇಷನ್ ಕಮಿಷನರ್, ಅದೇರೀತಿ ಸರ್ಕಾರದ ಲೋಕಲ್ ಸೆಲ್ಫ್ ಗೌರ್ನಮೆಂಟ್ ಸೆಕ್ರೆಟರಿ, ಪಿ.ಡಬ್ಲ್ಯೂ.ಡಿ. ಸೆಕ್ರೆಟರಿ, ಮುಂತಾದ ಕೆಲವು ಗಣ್ಯ ನಿವೃತ್ತ ಇಂಜನಿಯರುಗಳನ್ನು ಹಾಕಿಕೊಂಡಿದ್ದೇವೆ. ಸರ್ಕಾರದ ಮುಂದೆ ಇನ್ನೂ ಮೂರು ನಾಲ್ಕು ಯೋಜನೆಗಳಿವೆ. ಆ ಕಮಿಟಿಯವರು ಹಳ್ಳಿಮಾಲ, ಷಿಂಷಾ ಹೇಮಾವತಿ, ಕಾವೇರಿ ಈ ನಾಲ್ಕು ಯೋಜನೆಗಳನ್ನು ಪರಿಶೀಲನೆ ಮಾಡಿ ಕೊನೆಗೆ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಫಸ್ಟ್ ಸ್ಟೇಜ್, ಮತ್ತು ಸೆಕೆಂಡ್ ಸ್ಟೇಜ್ ಎಂದು ಎರಡು ಸ್ಟೇಜುಗಳಲ್ಲಿ ಇದನ್ನು ಕಾರ್ಯಗತ ಮಾಡಬೇಕೆಂದೂ ಫಸ್ಟ್ ಸ್ಟೇಜಿನಲ್ಲಿ ಹಳ್ಳಿಮಾಲ ತೆಗೆದುಕೊಂಡು ಸೆಕೆಂಡ್ ಸ್ಟೇಜಿನಲ್ಲಿ ಕಾವೇರಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದೂ ಶಿಫಾರಸು ಬಂದಿತ್ತು. ಆ ವರದಿಯ ಬಗ್ಗೆ ಟೆಕ್ನಿಕಲ್ ಒಪೀನಿಯನ್ ತೆಗೆದುಕೊಂಡಮೇಲೆ ಸರ್ಕಾರದವರು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದರ ಪ್ರಕಾರ ೧೯೬೨ನೇ ಜನವರಿಯಲ್ಲಿ ಹಳ್ಳಿಮಾಲ ಯೋಜನೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಹಳ್ಳಿಮಾಲ ಯೋಜನೆಬೇಕಿಲ್ಲ. ಫಸ್ಟ್ ಸ್ಟೇಜಿನಲ್ಲಿಯೇ ಕಾವೇರಿ ನದಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಬೆಂಗಳೂರು ನಗರದ ಕಾರ್ಪೊರೇಷನ್ನಿನವರು ನಿರ್ಣಯ ಒಂದನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಈ ಮಾನ್ಯ ಸಭಾ ಸದಸ್ಯರೂ ಸಹ ಹಳ್ಳಿಮಾಲಾ ಸ್ಕೀಂ ಬೇಕಿಲ್ಲ. ಕಾವೇರಿ ನದಿಯಿಂದಲೇ ನೀರು ತರಬೇಕು, ಹಳ್ಳಿಮಾಲ ಯೋಜನೆಗೆ ಈಗ ಹೋಗಬೇಡಿ ಎಂಬುದಾಗಿ ಒತ್ತಾಯಪೂರ್ವಕವಾಗಿ ಹೇಳಿದ್ದಾರೆ. ನಾವೂ ಸಹ ಆ ಬಗ್ಗೆ ಫೈನಲ್ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆ. ಆದರೆ ಇನ್ನೂ ಪೂರ್ತಿ ಇನ್‌ವೆಸ್ಟಿಗೇಷನ್ ಆಗಿಲ್ಲ. ಈಗಿರತಕ್ಕ ಎರಡು ಮೂರು ಯೋಜನೆಗಳಲ್ಲಿ ಯಾವುದು ತೆಗೆದುಕೊಳ್ಳಬೇಕು ಎಂಬುದನ್ನು ಫೈನಲ್ ಇನ್‌ವೆಸ್ಟಿಗೇಷನ್ ಮಾಡಿ ಇದಕ್ಕೆ ಎಷ್ಟು ಎಸ್ಟಿಮೇಟು ಆಗುತ್ತದೆ ಎಂಬ ಬಗ್ಗೆ ಒಂದು ಸ್ಟೇಟ್‌ಮೆಂಟ್ ತಯಾರುಮಾಡಿ ಅದಕ್ಕೆ ಕೇಂದ್ರ ಸರ್ಕಾರದವರ ಸಹಾಯವನ್ನು ಒತ್ತಾಯ ಮಾಡಿ ಎಷ್ಟು ಹಣ ಸಹಾಯಬೇಕೋ ಅಷ್ಟನ್ನು ತೆಗೆದುಕೊಳ್ಳಬೇಕೆಂದು ನಿರ್ಧರವಾಗಿದೆ. ಈಗ ಒಂದೇ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಬದಲಾಗಿ ಮೂರು ಸ್ಕೀಮುಗಳನ್ನೂ ಒಂದೇಸಲ ಇನ್‌ವೆಸ್ಟಿಗೇಷನ್ ಮಾಡಿಸಬೇಕೆಂದು ಅವರು ಹೇಳಿದ್ದಾರೆ. ಆ ಪ್ರಕಾರ ಅದಕ್ಕೆ ಬೇಕಾಗುವ ಸಿಬ್ಬಂದಿಯನ್ನು ಒದಗಿಸಿದ್ದೇವೆ. ಒಂದು ಡಿವಿಜನ್ನಿನಲ್ಲಿ ಈಗಾಗಲೇ ಕೆಲಸ ನಡೆಯುತ್ತಿದೆ. ಸಬ್ ಡಿವಿಜನ್ನಿನಲ್ಲಿ ಮೂರು ತಿಂಗಳುಗಳಿಂದ ಕೆಲಸ ನಡೆದಿದೆ.

ಫೈನಲ್ ಇನ್‌ವೆಸ್ಟಿಗೇಷನ್ ರಿಪೋರ್ಟ್ ಸರ್ಕಾರಕ್ಕೆ ಬರುತ್ತದೆ. ಆ ರಿಪೋರ್ಟ್ ಬಂದಮೇಲೆ ನಾವು ಒಂದು ನಿರ್ಧಾರಕ್ಕೆ ಬರುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಮಾತನ್ನು ನಾನು ವ್ಯಕ್ತ ಪಡಿಸುತ್ತಿದ್ದೇನೆ.

ಇನ್ನೊಂದು ಮಾತು ಹೇಳುವುದಾದರೆ, ಅನೇಕ ಜನ ಮೇಲಿಂದ ಮೇಲೆ ಕಾವೇರಿಯಿಂದಲೇ ಬೆಂಗಳೂರಿಗೆ ನೀರನ್ನು ತರಬೇಕು ಎನ್ನುವ ಮಾತನ್ನು ಹೇಳುತ್ತಿದ್ದಾರೆ. ನಾವು ಈಗ ಯಾವ ಯೋಜನೆ

(ಶ್ರೀ ವೀರೇಂದ್ರ ಪಾಟೀಲ್)

ಯನ್ನು ತೆಗೆದುಕೊಂಡರೂಕೂಡ ಕೊನೆಯಮಟ್ಟದಲ್ಲಿ ಕಾವೇರಿನದಿಯ ಯೋಜನೆಗೇ ಹೋಗಬೇಕಾಗುತ್ತದೆ. ಹಾಗೆ ಮಾಡಿದರೆ ಮಾತ್ರ ಈ ನೀರಿನ ಅಭಾವವನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ಸಧ್ಯಕ್ಕೆ ಹಳ್ಳಿಮಾಲಾ ಯೋಜನೆಯನ್ನ ತೆಗೆದುಕೊಂಡರೂ ಕೂಡ ಇದು ಮೊದಲನೇ ಸ್ಟೇಜ್. ಆ ಮೇಲೆ ಹಳ್ಳಿಮಾಲಾ-ಕಂ-ಕಾವೇರಿ. ಅಥವಾ ಶಿಂಷಾ ಕಂ-ಕಾವೇರಿ. ಕಾವೇರಿ—ಇದ್ದೇಇದೆ. ಈ ಸ್ಕೀಮುಗಳನ್ನು ತೆಗೆದುಕೊಳ್ಳುವುದರಲ್ಲಿ ಸರ್ಕಾರದವರು ಎರಡು ಮೂರು ಅಂಶಗಳನ್ನು ನಿರ್ಧಾರ ಮಾಡಬೇಕಾಗುತ್ತದೆ. ಅನಂತರ ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಟೆಕ್ನಿಕಲ್ ಒಪೀನಿಯನ್ ಇಟ್ಟುಕೊಂಡು ತಜ್ಞರು ಇನ್ವೆಸ್ಟಿಗೇಷನ್ ರಿಪೋರ್ಟ್ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ಜನಗಳಿಗೆ ನೀವು ಎಲ್ಲಿಂದ ನೀರನ್ನು ತರುತ್ತೀರಿ ಎನ್ನುವುದು ಬೇಕಾಗಿಲ್ಲ. ಅವರಿಗೆ ಇರುವಂಥಾದ್ದು ಆದಷ್ಟು ಬೇಗ ನೀರಿನ ಕೊರತೆಯನ್ನು ನಿವಾರಣೆ ಮಾಡಬೇಕು ಎನ್ನುವಂಥಾದ್ದು. ಹಳ್ಳಿಮಾಲಾದಿಂದಲಾದರೂ ನೀರು ತನ್ನಿ, ಕಾವೇರಿಯಿಂದಾದರೂ ತನ್ನಿ, ಶಿಂಷಾದಿಂದಾದರೂ ತನ್ನಿ, ಎಲ್ಲಿಂದಾದರೂ ತನ್ನಿ ಅವರು ಈಗ ಇರುವಂಥಾ ಒಂದು ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಯಾವ ಯೋಜನೆ ಸಾಧ್ಯ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ.

ಇನ್ನು ಎರಡನೆಯದಾಗಿ, ಕ್ಯಾಪಿಟಲ್ ಅಥವಾ ಕಾಸ್ಟ್. ಯಾವ ಯೋಜನೆಯನ್ನು ತೆಗೆದುಕೊಂಡರೆ ಎಷ್ಟು ಹಣ ಖರ್ಚಾಗುತ್ತದೆ ಎನ್ನುವಂಥಾದ್ದನ್ನೂ ಕೂಡ ನಾವು ನೋಡಬೇಕಾಗುತ್ತದೆ. ರೆಕರಿಂಗ್ ಕಾಸ್ಟ್ ಪ್ರತಿ ವರ್ಷ ಅದರ ಮೈನ್‌ಟೆನೆನ್ಸ್ ಸಲುವಾಗಿ ಎಷ್ಟು ಹಣವನ್ನ ಖರ್ಚು ಮಾಡಬೇಕಾಗುತ್ತವೆ ಎಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ನಾವು ಯಾವುದೇ ಯೋಜನೆಯನ್ನು ತೆಗೆದುಕೊಳ್ಳಬೇಕಾದರೂ ಕೂಡ ಜನರಿಂದ ಹೆಚ್ಚು ದುಡ್ಡನ್ನು ವಸೂಲು ಮಾಡಬೇಕಾಗುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇಲ್ಲಿಯವರೆಗೂ ನಾವು ಬೆಂಗಳೂರಿನಲ್ಲಿ ನೀರನ್ನು ಒದಗಿಸುತ್ತಾ ಇರುವುದು ಪ್ರತಿ ಸಾವಿರ ಗ್ಯಾಲನ್ನಿಗೂ 7½ ಆಣೆಯಂತೆ. ಈಗ ಇದರಿಂದ ಸರ್ಕಾರಕ್ಕೆ ಹೆಚ್ಚು ಖರ್ಚು ಬರುತ್ತಿದೆ. ಅದಕ್ಕೋಸ್ಕರವಾಗಿ ಪ್ರತಿ ಸಾವಿರ ಗ್ಯಾಲನ್ನಿಗೂ 10½ ಆಣೆಯಂತೆ ಕೊಡಬೇಕು ಎಂದು ನಾವು ಕಾರ್ಪೊರೇಷನ್‌ನವರನ್ನು ಕೇಳುತ್ತಿದ್ದೇವೆ. ಈ ಅಂಶ ಅನೇಕ ಜನಗಳಿಗೆ ಗೊತ್ತಿರಬಹುದು. ಈಗ ಬೆಳಗಾಂನಲ್ಲಿ ನೀರನ್ನು ಒದಗಿಸಲು ಪ್ರತಿ ಸಾವಿರ ಗ್ಯಾಲನ್ನಿಗೆ 1 ರೂಪಾಯಿ 27 ನಯೇ ಪೈಸೆಯಂತೆ ನಾವು ವಸೂಲು ಮಾಡುತ್ತಿದ್ದೇವೆ. ಧಾರವಾಡದಲ್ಲಿ ಪ್ರತಿ ಸಾವಿರ ಗ್ಯಾಲನ್ನಿಗೂ 1 ರೂಪಾಯಿ 6 ನಯೇ ಪೈಸೆಯಂತೆ ವಸೂಲು ಮಾಡುತ್ತಿದ್ದೇವೆ. ಅದು ಕಾರ್ಪೊರೇಷನ್ ಅದಮೇಲೆ 80-82 ನಯೇ ಪೈಸೆ ಆಗಬಹುದು. ಮೈಸೂರಿನಲ್ಲಿ 75-80 ನಯೇ ಪೈಸೆಯಂತೆ ವಸೂಲಾಗುತ್ತಿದೆ. ಸರ್ಕಾರದವರು ನೀರನ್ನು ಒದಗಿಸುವುದರಲ್ಲಿ ವ್ಯಾಪಾರದ ನೀತಿಯನ್ನು ಅನುಸರಿಸುತ್ತಿಲ್ಲ. ನೀರನ್ನು ಒದಗಿಸುವುದಕ್ಕೋಸ್ಕರ ಕ್ಯಾಪಿಟಲ್ ಇನ್ವೆಸ್ಟ್ ಮಾಡಿ ಅದರಿಂದ ದುಡ್ಡುಮಾಡಿಕೊಳ್ಳುವ ಉದ್ದೇಶ ಸರ್ಕಾರಕ್ಕಿಲ್ಲ. ನೋ-ಪ್ರಾಫಿಟ್, ನೋ-ಲಾಸ್ ಬೇಸಿಸ್ ಮೇಲೆ ಸರ್ಕಾರದವರು ನೀರನ್ನು ಒದಗಿಸುತ್ತಿದ್ದಾರೆ. ಪ್ರತಿ ಒಂದು ಸಾವಿರ ಗ್ಯಾಲನ್ ನೀರಿಗೂ 10½ ಆಣೆಯಂತೆ ಕೊಡಬೇಕೆಂದು ನಾವು ಬೆಂಗಳೂರು ಕಾರ್ಪೊರೇಷನ್‌ನವರನ್ನು ಕೇಳುತ್ತಿದ್ದೇವೆ. ಈಗಾಗಲೇ ಕಾರ್ಪೊರೇಷನ್ನಿನಿಂದ ನಮಗೆ 70-80 ಲಕ್ಷ ರೂಪಾಯಿಗಳು ಬರಬೇಕಾಗಿದೆ. ಯಾವ ಸ್ಕೀಮನ್ನು ನಾವು ತೆಗೆದುಕೊಂಡರೂ ಕೂಡ ಪ್ರತಿ ಸಾವಿರ ಗ್ಯಾಲನ್ ನೀರಿಗೂ 1 ರೂಪಾಯಿ 12 ನಯೇ ಪೈಸೆಗಳಿಗಿಂತ ಕಡಿಮೆಯಾಗುವುದಿಲ್ಲ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಬಹುಶಃ ರೆಕರಿಂಗ್ ಕಾಸ್ಟ್ ಹೆಚ್ಚು ಆದರೂ ಆಗಬಹುದು. ಅದಕ್ಕೆ ಎಷ್ಟು ಖರ್ಚಾದರೂ ಅದನ್ನು ಕಾರ್ಪೊರೇಷನ್‌ನವರು ಕೊಡಲಿಕ್ಕೆ ತಯಾರು ಇದ್ದಾರೆ ಎಂದು ನಾವು ಮಾಡುತ್ತಿದ್ದೇವೆ. ಒಂದು ಸಾವಿರ ಗ್ಯಾಲನ್ ನೀರಿಗೆ 7½ ಆಣೆಯಂತೆ ಈ ಬೆಂಗಳೂರು ನಗರ ಬಿಟ್ಟರೆ ಬೇರೆ ನಮ್ಮ ರಾಜ್ಯದಲ್ಲಿ ಯಾರಿಗೂ ಕೊಡುತ್ತಾ ಇಲ್ಲ. ಈ ವಿಷಯವನ್ನು ಕೂಡ ನಾವು ಕಾರ್ಪೊರೇಷನ್ ನವರಿಗೆ ಹೇಳಿದ್ದೇವೆ. ಮತ್ತು ಮೇಯರ್ ಸಂಗಡ ಕೂಡ ನಾನು ಮಾತನಾಡಿದ್ದೇನೆ. ಈ ಒಂದು ಪರಿಸ್ಥಿತಿಯಲ್ಲಿ ನಾವು ಯಾವ ಸ್ಕೀಮನ್ನು ತೆಗೆದುಕೊಂಡರೂ ಕೂಡ 22-23 ಕೋಟಿ ರೂಪಾಯಿಗಳಿಗೆ ಕಡಿಮೆ ಯಾಗುವುದಿಲ್ಲ ಎಂದು ಅಂದಾಜು ಮಾಡಿದ್ದಾರೆ. ರಿವೈಸ್ಡ್ ಎಸ್ಟಿಮೇಟ್ ಮಾಡಿದರೆ ಇನ್ನೂ ಎಷ್ಟು ಹೆಚ್ಚಾಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಬಹುಶಃ 25-30 ಕೋಟಿ ರೂಪಾಯಿಗಳು ಆದರೂ ಆಗಬಹುದು. ಅದಕ್ಕೂಸಹ ನಾವು ತಯಾರಾಗ ಬೇಕು. ಅದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆ. ಅವರು ಇನ್ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಡಿವಿಜನ್‌ನಲ್ಲಿ ಕೆಲಸ ನಡೆಯುತ್ತಿದೆ. ಅಲ್ಲಿಂದ ವರದಿ ಬಂದಮೇಲೆ ಅದಕ್ಕೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಹೇಳಬಹುದು. ಹಳ್ಳಿಮಾಲಾ-ಕಂ-ಕಾವೇರಿ ತೆಗೆದುಕೊಂಡರೂ 22-23 ಕೋಟಿ ರೂಪಾಯಿಗಳಾಗಬಹುದು. ಬರೀ ಕಾವೇರಿಯನ್ನೇ ತೆಗೆದುಕೊಂಡರೂ ಕೂಡ 25 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಆಗಬಹುದು. ಅಷ್ಟೊಂದು ಹಣವನ್ನು ಎಲ್ಲಿಂದ ತರಬೇಕು ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ಇಂಥಾ ಕಷ್ಟ ಪರಿಸ್ಥಿತಿ ಇದೆ ಎಂದು ಕೇಂದ್ರ ಸರ್ಕಾರದವರ ಸಹಾಯವನ್ನು ಪಡೆಯಲು ಮನವಿ ಮಾಡಿಕೊಂಡಿದ್ದೇವೆ. ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಯಾವ ಮಂತ್ರಿಗಳೇ ಬರಲಿ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಅಭಾವ ಇದೆ, ಇಲ್ಲಿಗೆ ನೀರು ಸರಬರಾಜು ಮಾಡುವಂಥಾ ವಿಷಯದಲ್ಲಿ ಕೇಂದ್ರ ಸರ್ಕಾರದವರ ಒಂದು ನೆರವು, ಸಹಾಯವನ್ನು ದೊರಕಿಸಿಕೊಡಬೇಕೆಂದು ನಾವು ಹೇಳುತ್ತಿದ್ದೇವೆ. ಕಾರ್ಪೊರೇಷನ್ನಿನವರೂ ಕೇಳುತ್ತಿದ್ದಾರೆ. ಈಗ ಮೊನ್ನೆತಾನೆ ಕೇಂದ್ರದಿಂದ ಡಿಫೆನ್ಸ್ ಮಂತ್ರಿಗಳು ಬಂದಿದ್ದರು. ಅವರಲ್ಲಿಯೂ ಸಹ ನಾವು ಈ ವಿಷಯವನ್ನು ಅರಿಕೆ ಮಾಡಿಕೊಂಡೆವು.

Sri C. J. MUCKANNAPPA.—When you ask the Municipalities to borrow, why not you ask the Corporation also to borrow money ?

ಶ್ರೀ ವೀರೇಂದ್ರ ಪಾಟೀಲ್.—ಅದರಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಇವೊತ್ತು ಕಾರ್ಪೊರೇಷನ್ನಿಗೆ ನೀರನ್ನು ಸಪ್ಲೈ ಮಾಡುವ ಜವಾಬ್ದಾರಿ ಸರ್ಕಾರದ್ದು. ಅವರಿಗೆ ಸರ್ಕಾರದವರು ನೀರನ್ನು ಸಪ್ಲೈ ಮಾಡಿ ಅವರಿಂದ ನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ. ಕಾರ್ಪೊರೇಷನ್

ಬೌಂಡರಿಗೆ ನೀರನ್ನು ತಂದು ಕೊಡುವ ಜವಾಬ್ದಾರಿ ಸರ್ಕಾರದವರದು. ಕಾರ್ಪೊರೇಷನ್ ಏರಿಯಾದಲ್ಲಿ ಜನಗಳಿಗೆ ನೀರನ್ನು ಒದಗಿಸುವುದು ಕಾರ್ಪೊರೇಷನ್ನಿನವರ ಜವಾಬ್ದಾರಿ. ನಾವು ಈಗಾಗಲೇ ಕೇಂದ್ರ ಸರ್ಕಾರದವರನ್ನು ನಮಗೆ 12 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಕೇಂದ್ರ ಸರ್ಕಾರದಿಂದ ಸಾಲ ಪಡೆಯದೆ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ ಎನ್ನುವಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟ ಮಾಡುತ್ತೇನೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಲಾಂಗ್ ರೇಂಜ್ ವಾಟರ್ ಸಪ್ಲೈ ಸ್ಕೀಮಿಗೋಸ್ಕರ 15 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದೆ. ಈಗ ನಮಗೆ ಕಾವೇರಿ ವಾಟರ್ ಸಪ್ಲೈ ಸ್ಕೀಮಿನ ಮೊದಲನೆಯ ಸ್ಟೇಜಿಗೆ 12-15 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೆ ಕೇಂದ್ರ ಸರ್ಕಾರದಿಂದ ನಮಗೆ ಸಾಲ ಬರಬೇಕು. ಅದು ಬರುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಆಸೆ ಮಾಡುತ್ತೇನೆ. ಶ್ರೀಮಾನ್ ಬಿ. ನಂಜಪ್ಪನವರು ಮತ್ತು ರೇವಣಸಿದ್ದಪ್ಪನವರು ಹೇಳಿದರು, ಬೆಂಗಳೂರಿನಲ್ಲಿ ಬೋರ್‌ವೆಲ್ ಹಾಕಿ ನೀರಿನ ವ್ಯವಸ್ಥೆಯನ್ನು ಏತಕ್ಕೆ ಮಾಡಿ ಕೊಳ್ಳಬಾರದು ಎಂದು. ನಾನ ಈ ವಿಷಯದಲ್ಲಿ ಈಗಾಗಲೇ ಹೇಳಿದ್ದೇನೆ. ಬೋರ್ ವೆಲ್‌ಹಾಕಿ ನೀರನ್ನು ಒದಗಿಸುವ ವಿಷಯವನ್ನು ಕಾರ್ಪೊರೇಷನ್ನಿನವರು ವಿಚಾರಮಾಡಬೇಕು. ಸರ್ಕಾರದವರು ಆ ಚಿತ್ರದಲ್ಲಿ ಬರುವಹಾಗಿಲ್ಲ. ಆ ರೀತಿ ಮಾಡಿಕೊಂಡರೂ ಸಹ ಈ ಪ್ರಶ್ನೆ ಬಗೆ ಹರಿಯುವುದಿಲ್ಲ. ಅದರಿಂದ ತಾತ್ಕಾಲಿಕವಾಗಿ ಅನುಕೂಲವನ್ನು ಒದಗಿಸ ಬಹುದೇ ಹೊರತು ಆ ಪ್ರಶ್ನೆಯನ್ನು ಸಂಪೂರ್ಣವಾಗಿ ಬಗೆ ಹರಿಸುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀಮಾನ್ ಕೆ. ದೇವಯ್ಯನವರು ಟ್ರಿಪ್ಲಿಕೇಟ್ ಟ್ರೈನ್ ಹಾಕಿ ಬೇಗ ನೀರನ್ನು ಒದಗಿಸಬೇಕೆಂದು ಹೇಳಿದರು. 56 ಇಂಚಿನ ಪೈಪು ಬೇಕು ಎಂದು ನಾವು ಈಗಾಗಲೇ ಆರ್ಡರ್ ಮಾಡಿದ್ದೇವೆ. ಆ ಯೋಜನೆಯನ್ನು ಕಾರ್ಯಗತ ಮಾಡಬೇಕಾದರೆ ಪೈಪುಗಳು ಬರುವ ವ್ಯವಸ್ಥೆಯನ್ನು ಮಾಡಬೇಕು. ದುಡ್ಡಿನ ಕೊರತೆ ಬೇರೆ ತೀವ್ರವಾಗಿದೆ. ಅದೂ ಅಲ್ಲದೆ ಅದಕ್ಕೆ ಎಷ್ಟು ಪೈಪುಗಳು ಬೇಕಾಗುತ್ತದೆ, ಎಷ್ಟು ಹಣ ಬೇಕಾಗುತ್ತದೆ ಎಂಬುದು ಈಗ ನಮಗೆ ಖಚಿತವಾಗಿ ಗೊತ್ತಿಲ್ಲ. ಅದನ್ನು ಇನ್‌ವೆಸ್ಟಿಗೇಷನ್ ಮಾಡುವ ಸಲುವಾಗಿ ಆ ಕೆಲಸವನ್ನು ತಜ್ಞರಿಗೆ ಒಪ್ಪಿಸಿದ್ದೇವೆ. ಅವರಿಂದ ವರದಿ ಬರುವವರೆಗೂ ನಾವು ಯಾವ ಕೆಲಸವನ್ನೂ ಮಾಡುವಹಾಗಿಲ್ಲ ಎನ್ನುವಂಥಾದ್ದನ್ನು ನಾನು ವ್ಯಕ್ತಪಡಿಸುತ್ತೇನೆ.

ಈಗಾಗಲೇ ಈ ಪ್ರಶ್ನೆಯನ್ನು ತಜ್ಞರಿಗೆ ಒಪ್ಪಿಸಿದ್ದೇವೆ. ಡೀಟೇಲ್ಡ್ ಇನ್‌ವೆಸ್ಟಿಗೇಷನ್ ಮಾಡುತ್ತಾ ಇದ್ದಾರೆ.

4-30 P.M.

ಶ್ರೀ ಡಿ. ಎಂ. ಸಿದ್ದಯ್ಯ.—ಮೇಕೆದಾಟ್ ಯೋಜನೆ ಇನ್‌ವೆಸ್ಟಿಗೇಟ್ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನೂ ಕೂಡ ಅಡ್ ಹಾಕ್ ಕಮಿಟಿಯವರು ಇನ್‌ವೆಸ್ಟಿಗೇಟ್ ಮಾಡಿದರು. ಅದರಿಂದ ನೀರು ತರಬೇಕಾಗಿದ್ದರೆ ಅದು ಕೆಳ ಮಟ್ಟದಲ್ಲಿದೆ, ಇದು ಎತ್ತರದಲ್ಲಿದೆ, ಹೆಚ್ಚು ಪಂಪಿಗ್ ಮಾಡಬೇಕಾಗುತ್ತದೆ ಎಂದು ತಿಳಿದುಕೊಂಡು ಶಿವಸಮುದ್ರದಿಂದ ನೀರು ತರುವುದಕ್ಕೆ ಸಾಧ್ಯವಿದೆ ಎಂದು ತಜ್ಞರ ಅಭಿಪ್ರಾಯ ಬಂತು. ಅದೇ ರೀತಿಯಿಂದ ಹೇಮಾವತಿಯಿಂದ ನೀರು ತರುವುದನ್ನು ವಿಚಾರ ಮಾಡಿದ್ದೇವೆ. ಅಲ್ಲಿಂದ ತರಬೇಕಾಗಿದ್ದರೆ ಸುಮಾರು 100 ಮೈಲಿ ಆಗುತ್ತದೆ. ಅದಕ್ಕೆ ಹೆಚ್ಚು ಖರ್ಚು ಬರುತ್ತದೆ ಎಂದು ಹೇಳಿ ಆ ಎರಡು ಯೋಜನೆಗಳನ್ನೂ ಕೈ ಬಿಟ್ಟುಬಿಡಲಾಯಿತು. ಈಗ ನಮ್ಮ ಮುಂದೆ ಇರುವಂಥದು ಮೂರೇ ಮೂರು ಯೋಜನೆಗಳು ಹಳ್ಳಿಮಾಲಾ ಕಂ ಕಾವೇರಿ ; ಶಿಂಷಾ ಕಂ ಕಾವೇರಿ, ಮತ್ತು ಕಾವೇರಿ. ಶಿವಸಮುದ್ರದಿಂದ ತರಬೇಕೆಂದರೆ ಬಹುಶಃ 60—65ಮೈಲಿ ಆಗುತ್ತದೆ. ಈ ಮೂರು ಯೋಜನೆಗಳೂ ತಜ್ಞರ ಆಲೋಚನೆಯಲ್ಲಿವೆ ಎಂಬ ಸೂಚನೆಮಾಡಿ ಅವರು ವರದಿ ಕೊಟ್ಟಮೇಲೆ ಸರ್ಕಾರದವರು ಎಲ್ಲಾ ವಿಚಾರಗಳನ್ನೂ—ತಾವು ಹೇಳಿದ ಅಂಶಗಳನ್ನೂ ಕೂಡ ಗಮನದಲ್ಲಿಟ್ಟುಕೊಂಡು ಯೋಗ್ಯ ನಿರ್ಧಾರ, ನಿರ್ಣಯ ಕೈಕೊಳ್ಳಬೇಕಾಗುತ್ತವೆ ಎಂಬ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ತಮಗೆ ಕೊಡುತ್ತೇನೆ ಇಷ್ಟೆಲ್ಲಾ ಹೇಳಿದ ಮೇಲೆ ಶ್ರೀಮಾನ್ ಮಾದಯ್ಯ ಗೌಡರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆ ಎಂದು ಆಶಿಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ನೀರಿನ ಅಭಾವವಿರುವ ಬೆಂಗಳೂರು ನಗರಕ್ಕೆ ಯಾವ ವರ್ಷದೊಳಗೆ ನೀರನ್ನು ಕೊಡಿಸುತ್ತೀರಿ ಎಂಬುದನ್ನು ಖಚಿತವಾಗಿ ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇಷ್ಟೆಲ್ಲಾ ಹೇಳಿದ ಮೇಲೂ, ಯಾವಾಗ ನೀರು ಒದಗಿಸುವುದಕ್ಕೆ ಸಾಧ್ಯವಿದೆ ಎನ್ನುವದನ್ನು ಹೇಳಬೇಕೆಂದರೆ, ಅಡ್‌ಹಾಕ್ ಕಮಿಟಿ ರಿಪೋರ್ಟ್‌ನಲ್ಲಿ ಹಳ್ಳಿಮಾಲಾ ಬಹುಶಃ ೩೦ ಮೈಲಿ ಆಗುತ್ತದೆ ೩೦ ಮೈಲಿವರೆಗೆ ಪೈಪ್ ಎಳೆಯುವುದಕ್ಕೆ ಕಷ್ಟವಾಗುವುದಿಲ್ಲ, ತೀವ್ರವಾಗಿ ಮಾಡಬಹುದು ಮತ್ತು ಅಲ್ಲೊಂದು ರಿಸರ್ವಾಯರ್ ಹಾಕಿ 4-5ವರ್ಷದಲ್ಲಿ ನೀರು ಒದಗಿಸುವುದಕ್ಕೆ ಸಾಧ್ಯವಿದೆ ಎಂದು ವ್ಯಕ್ತಪಡಿಸಿದ್ದಾರೆ. ಕಾವೇರಿ ನದಿಯಿಂದ ನೀರು ಒದಗಿಸಬೇಕಾದರೆ ಎಷ್ಟು ದಿವಸವಾಗುತ್ತದೆ, ಎಷ್ಟು ದುಡ್ಡು ತಗಲುತ್ತದೆ ಎಂಬುದನ್ನು ಡೀಟೇಲ್ಡ್ ಇನ್‌ವೆಸ್ಟಿಗೇಷನ್ ಆದಮೇಲೆ ಹೇಳಬಹುದು. ನಮ್ಮ ಕಾತುರತೆ ಆದಷ್ಟು ಜಾಗ್ರತೆ ನೀರು ತರಬೇಕೆಂದು ಇದೆ. ಇಂಥಾ ನಿರ್ಣಯ ಒಪ್ಪಿಕೊಳ್ಳಬೇಕಾಗಿದ್ದರೆ ಇದರ ಮೇಲೆ ಸಾಕಾದಷ್ಟು ಗಮನ ಕೊಡಬೇಕಾದ್ದು ಅವಶ್ಯಕ, ಆದ್ದರಿಂದಲೇ ೩೦ ವರ್ಷದ ನಂತರ ನೀರು ತರುವ ಯೋಜನೆಯನ್ನು ನಾವು ಹೇಳುತ್ತಿಲ್ಲ. ಅದರಿಂದ ಲಾಭವೂ ಇಲ್ಲ. ಇವತ್ತಿನ ಹಾಹಾಕಾರ ಹೋಗಲಾಡಿಸುವುದಕ್ಕೆ ಯಾವುದು ಯೋಗ್ಯ, ಫೀಸಿಬಲ್ ಆಗಿದೆಯೋ ಅದನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ರಿಪೋರ್ಟ್ ಬಂದಮೇಲೆ ಯೋಗ್ಯ ನಿರ್ಣಯ ತೆಗೆದುಕೊಳ್ಳಬಹುದು.

ಶ್ರೀ ಜೆ. ದೇವಯ್ಯ (ಮಂಡ್ಯ).—ಬೆಂಗಳೂರಿಗೆ ನೀರು ತರುವಾಗ ವ್ಯವಸಾಯಕ್ಕೂ ಅವಶ್ಯಕವಿದ್ದರೆ ನೀರುಕೊಡಲು ಅಂದಾಜು ಹಾಕಿಕೊಂಡು ನೀರು ತರುತ್ತೀರಾ ?

†ಶ್ರೀ ಟಿ. ಮಾದಯ್ಯ ಗೌಡ.—ಸ್ವಾಮಿ ಅಧ್ಯಕ್ಷರೇ, ಈಗ ನಮ್ಮ ಸಭೆಯಲ್ಲಿ ಚರ್ಚೆಯಾದಂಥ ವಿಚಾರದ ಮೇಲೆ ಏನೂ ಹೆಚ್ಚಿನ ಒಂದು ಉತ್ತರ ಹೇಳಬೇಕಾದಂಥ ಅಗತ್ಯ ಕಂಡುಬರಲಿಲ್ಲ. ಏಕೆಂದರೆ ಏನು ಮಾನ್ಯ ಸದಸ್ಯರು ಅಭಿಪ್ರಾಯ ಪಟ್ಟರೋ ಅದರಲ್ಲಿ ಬಹಳ ಗಾಢವಾದ ವಿಚಾರಗಳನ್ನು ಅವರು ಎತ್ತಿ ಹೇಳಿದರು. ಒಂದೆರಡು ವಿಚಾರಗಳು ಕೇವಲ ಸರಳ

(ಶ್ರೀ ಟಿ. ಮಾದಯ್ಯ ಗೌಡ)

ವಾಗಿ ಹೇಳಿದ ವಿಚಾರಗಳು. ಅವನ್ನು ಹೆಚ್ಚು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಭಾವಿಸುತ್ತೇನೆ. ಅವರು ಹೇಳಿದರು, ಸ್ವಾರ್ಥದೃಷ್ಟಿಯಿಂದ, ಮಾದಯ್ಯ ಗೌಡರು ರಾಮನಗರದ ತಾಲ್ಲೂಕು ಕ್ಷೇತ್ರದಿಂದ ಬಂದವರು, ಅಲ್ಲಿ ಜಮೀನು ಮುಳುಗಡೆಯಾಗುವುದಕ್ಕೆ ಇಷ್ಟವಿಲ್ಲ, ಆದ್ದರಿಂದ ಈ ರೀತಿ ಒಂದು ನಿರ್ಣಯ ತಂದಿದ್ದಾರೆ ಎಂದು. ನಮ್ಮ ಕ್ಷೇತ್ರದ ಒಂದು ಅನುಕೂಲವನ್ನು ಕೂಡ ನಾವು ನೋಡಬೇಕಾದ್ದು, ನ್ಯಾಯ, ಧರ್ಮ. ತಾವೂ ಕೂಡ ತಮ್ಮ ತಮ್ಮ ಕ್ಷೇತ್ರಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತೀರಿ. ಅದನ್ನು ನೋಡಿಕೊಳ್ಳದಿದ್ದರೆ ನಾವೆಲ್ಲ ಇದ್ದು ಪ್ರಯೋಜನವಿಲ್ಲ. ಆದ್ದರಿಂದ ಯಾರನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ. ನಾನು ರಾಮನಗರ ತಾಲ್ಲೂಕಿನವನು ಅಥವಾ ಚನ್ನಪಟ್ಟಣ ತಾಲ್ಲೂಕಿನವನಾದರೂ ಕೂಡ ಆ ತಾಲ್ಲೂಕಿನ ಮೇಲೆ ಎಷ್ಟು ಅಭಿಮಾನವಿದೆಯೋ ಅಷ್ಟೇ ಅಭಿಮಾನ ಮೈಸೂರು ದೇಶದ ಪ್ರತಿಯೊಂದು ಭಾಗದ ಮೇಲೂ ಕೂಡ ಇದೆ. ಅದರಲ್ಲೂ ಕೂಡ ಈ ಬೆಂಗಳೂರು ಪಟ್ಟಣ ನಮಗೆ ಅತ್ಯಂತ ಪ್ರಿಯವಾದ ಪಟ್ಟಣ. ನಮಗೆ ವಿದ್ಯಾ, ಬುದ್ಧಿಯನ್ನು ಹೇಳಿಕೊಟ್ಟು, ಮುಂದೆ ನಮ್ಮ ಮತ್ತು ನಮ್ಮ ಮಕ್ಕಳ ಪುರೋಭಿವೃದ್ಧಿಗೆ ಇರುವ ಪಟ್ಟಣ ಇದು. ಇದರ ಒಂದು ಯೋಗಕ್ಷೇಮವೂ ಕೂಡ ನಮ್ಮೆಲ್ಲರಿಗೂ ಅಷ್ಟೇ ದೊಡ್ಡದು ಎನ್ನುವುದರಲ್ಲಿ ನಾನು ಹಿಂದು ಮುಂದು ನೋಡುವುದಿಲ್ಲ. ಈ ಬೆಂಗಳೂರು ಪಟ್ಟಣ ಎಷ್ಟು ಪ್ರಾಮುಖ್ಯವಾದದ್ದು, ಎಷ್ಟು ಅನುಕೂಲವಾದದ್ದು ಎಂದರೆ, ಇದು ನಾವೆಲ್ಲರೂ ಬಂದು ಹೋಗಬೇಕಾಗಿರತಕ್ಕ ಪಟ್ಟಣ ಎಂಬುದನ್ನು ಕೂಡ ಮರೆಯುವಹಾಗಿಲ್ಲ. ಪ್ರಾಮುಖ್ಯವಾಗಿರತಕ್ಕ ರಾಜಧಾನಿ, ಅನೇಕ ವಿಷಯಗಳಿಗಾಗಿ ಬಂದು ಹೋಗಬೇಕು. ಇದರ ಯೋಗಕ್ಷೇಮ ನಮಗೆ ಬೇಡ, ಬೆಂಗಳೂರಿಗೆ ಬಂದಾಗ ನೀರು ಇಲ್ಲದೇ ಇದ್ದರೂ ಚಿಂತೆ ಇಲ್ಲ ಎನ್ನುವವರು ಬಹುಶಃ ಯಾರೂ ಇರಲಾರರು. ಈ ಒಂದು ದೃಷ್ಟಿಯಿಂದ ಬೆಂಗಳೂರಿನ ಯೋಗಕ್ಷೇಮವನ್ನೂ ಎಲ್ಲರೂ ನೋಡಿಕೊಳ್ಳಬೇಕಾಗಿದೆ. ನನಗೆ ಬೆಂಗಳೂರಿನ ಯೋಗಕ್ಷೇಮವು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ರಾಮನಗರ ಕ್ಷೇತ್ರದ ಹಿತಚಿಂತನೆ. ರಾಮನಗರದ ಹಿತಚಿಂತನೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಬೆಂಗಳೂರು ನಗರದ ಹಿತಚಿಂತನೆ. ಆದ್ದರಿಂದ ಬೆಂಗಳೂರು ನಗರಕ್ಕೆ ಅತ್ಯುತ್ತಮವಾಗಿ ನೀರನ್ನು ಒದಗಿಸಬೇಕು. ಯಾವ ಕೊರತೆಯೂ ಇಲ್ಲದೆ ಸುಖ ಸಂತೋಷದಿಂದ ಇರಬೇಕೆಂದು ಕೆಲವರು ಇಲ್ಲಿ ಯಾವರೀತಿ ಬಯಸುತ್ತಾರೋ ಅದೇ ರೀತಿ ರಾಮನಗರ ತಾಲ್ಲೂಕಿನಲ್ಲಿ ಹಳ್ಳಿ ಮಾಲಾ ಯೋಜನೆಯಿಂದ ಮುಳುಗಡೆಯಾಗತಕ್ಕ ರೈತರ ಯೋಗಕ್ಷೇಮವನ್ನೂ ನೋಡಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಈ ಎರಡು ವಿಷಯಗಳೂ ದ್ವಂದ್ವವಾಗಿವೆ. ಇಷ್ಟು ಮಾತ್ರದಿಂದಲೇ ಇದರಲ್ಲಿ ಸ್ವಾರ್ಥದೃಷ್ಟಿ ಎಂದು ಹೇಳಿ ದೊಡ್ಡದಾಗಿ ಅಪಾದನೆ ಮಾಡುವುದು ತರವಲ್ಲ ಎಂದು ಅನಿಸುತ್ತದೆ. ನನ್ನ ಮಿತ್ರರು the Government must be given a free hand ಎಂದು ಹೇಳಿದರು. ಎಲ್ಲ ವಿಚಾರದಲ್ಲೂ ಆ ಮಾತು ಹೇಳದೇ ಈಗ ಮಾತ್ರ ಹೇಳಿದ್ದಾರೆ. ಅದೂ ಅಲ್ಲದೆ ಟೆಕ್ನಿಕಲ್ ಅಡ್ವೈಸ್ ಇದೆ ಮಾಡೋಣ ಅಂತ ಹೇಳಿದರು. ಟೆಕ್ನಿಕಲ್ ಅಡ್ವೈಸ್‌ಗೆ ಮನ್ನಣೆ ಮಾಡಲೇಬೇಕು, ಅದರಲ್ಲಿ ಸಂದೇಹವಿಲ್ಲ. ಆದರೂ ಕೂಡ ಟೆಕ್ನಿಕ್ಯಾಲಿಟೀಸ್ ತಿಳಿಯಬಂದಂಥವರೆಲ್ಲ ಕೂಡ ಆ human aspect ಏನೆಂಬುದನ್ನು ಎಷ್ಟು ಮಾತ್ರ ನೋಡುತ್ತಾರೆ? ನಮಗೆ ಅದು ಅರ್ಥವಾಗುತ್ತದೆ. ಟೆಕ್ನಿಕಲ್ ಅಡ್ವೈಸ್ ಕೊಡುವಾಗ ಹಳ್ಳಿ ಮಾಲಾ ಪ್ರಾಜೆಕ್ಟ್ ಏನಾದರೂ ಮಾಡಿ ಮಾಡಬೇಕೆಂಬ ಯೋಚನೆ ಇಟ್ಟುಕೊಂಡು ತಪ್ಪು ಅಂಕಿ ಅಂಶ ಕೊಟ್ಟರೇನೋ ಎಂದು ನನಗೆ ಅನಿಸುತ್ತದೆ. ಒಂದು ಉದಾಹರಣೆ ಹೇಳುತ್ತೇನೆ. ಹಳ್ಳಿ ಮಾಲಾ ಬೆಂಗಳೂರಿಗೆ ೩೦ ಮೈಲಿ ಇದೆ ಎಂದು ಹೇಳಿದರು. ನಾನಾದರೂ ಹೇಳುತ್ತೇನೆ ರಾಮನಗರಕ್ಕೂ ಬೆಂಗಳೂರಿಗೂ ೩೦ ಮೈಲಿ ಆಗುತ್ತದೆ. ರಾಮನಗರಕ್ಕೆ ಅದು 1½ ಮೈಲಿ ಆಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ್ದು ೩೦ ಮೈಲಿ ಅಂತ ಅಲ್ಲ, ಪೈಪ್ ಲೈನ್ ಹಾಕುವುದು ೩೦ ಮೈಲಿ ಆಗುತ್ತದೆ ಎಂದು.

ಶ್ರೀ ಟಿ. ಮಾದಯ್ಯ ಗೌಡ.—ಆದರೂ ಕೂಡ ಇಲ್ಲಿಂದ ಹೋಗತಕ್ಕ ರಸ್ತೆ ಅಂಕು ಡೊಂಕಾಗಿದ್ದರೆ ತಾವು ಹೇಳುವುದು ಸರಿ. ಹಳ್ಳಿ ಮಾಲಾದಿಂದ ಮುಳುಗಡೆಯಾಗತಕ್ಕ ರೈತರು ಎಷ್ಟಾಗುತ್ತಾರೆ, ಎಷ್ಟು ಜಮೀನು ಮುಳುಗಡೆಯಾಗುತ್ತದೆ, ಎಷ್ಟು ಜನ ಜಾಗ ಬಿಡಬೇಕಾಗುತ್ತದೆ ಇತ್ಯಾದಿ ವಿಷಯಗಳನ್ನು ಹೇಳುವಾಗ, ಅವರ ಕಷ್ಟ ನಷ್ಟ ಎಷ್ಟಾಗುತ್ತದೆ ಎಂಬುದನ್ನು ಹೇಳುವಾಗ ಕೊಟ್ಟಿರತಕ್ಕ ಅಂಕಿ ಅಂಶಗಳು ನಮಗೆ ಸಮರ್ಪಕವಾಗಿದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಒಂದು ದೃಷ್ಟಿಯಿಂದ, ಒಂದು human aspect ಹೇಳಿದರು, ಆ ದೃಷ್ಟಿಯಿಂದ ಬಹುಶಃ ಅನುಕೂಲವಾಗಬಹುದೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ.—ಹಾಗಾದರೆ ಅವರು ಕೊಟ್ಟಿರುವ ಅಂಕಿ ಅಂಶಗಳು ತಪ್ಪೆಂದು ಹೇಳುತ್ತೀರಾ?

Mr. SPEAKER.—Estimates are bound to differ unless factors are the same.

ಶ್ರೀ ಎಸ್. ಎಂ. ಕೃಷ್ಣ.—Deliberate ಆಗಿ ತಪ್ಪು ಕೊಟ್ಟಿದ್ದಾರೆಂದು ಹೇಳುವುದೆ?

ಶ್ರೀ ಟಿ. ಮಾದಯ್ಯ ಗೌಡ.—ಬೆಂಗಳೂರಿಗೆ ನೀರನ್ನು ಒದಗಿಸುವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರೆ ಹಳ್ಳಿಯವರಿಗೆ ತೊಂದರೆಯಾಗುತ್ತದೆಯೋ ಏನೋ ಎಂದು ಅಭಿಪ್ರಾಯ ಪಟ್ಟರು. ಹಳ್ಳಿಗಾಡಿನಲ್ಲಿ ನೀರಿಲ್ಲದೆ ಬಹಳ ಕಷ್ಟದಲ್ಲಿದ್ದಾರೆ ಅಲ್ಲಿನ ಜನ. ಅವರಿಗೆ ಅನುಕೂಲ ಮಾಡಬೇಕೆಂದು ಒತ್ತಾಯ ಮಾಡುವವರು ಯಾರಿದ್ದಾರೋ ನನಗಂತೂ ಗೊತ್ತಿಲ್ಲ. ಅಂದ ಮಾತ್ರಕ್ಕೇ ಬೆಂಗಳೂರಿಗೆ ನೀರು ಬೇಡ, 10 ಗ್ಯಾಲನ್ ನೀರೇ ಸಾಕು, ಅನೇಕ ಕಡೆ ಇಷ್ಟೂ ಇಲ್ಲ ಎಂದು ಹೇಳಿದರೆ ಅದಕ್ಕೆ ನಾನು ಒಪ್ಪುವುದಿಲ್ಲ.

ಶ್ರೀ ಜಿ. ಮರುಳಪ್ಪ (ಕಡೂರು).—ಬೆಂಗಳೂರಿಗೆ ನೀರು ಬೇಡವೆಂದು ಯಾರೂ ಹೇಳಿಲ್ಲ, ಸುಲಭವಾಗಿ ಸಿಕ್ಕುವ ಕಡೆಯಿಂದ ಒದಗಿಸಬೇಕೆಂದು ಹೇಳಿದೆವು, ಅಷ್ಟೆ.

ಶ್ರೀ ಟಿ. ಮಾದಯ್ಯ ಗೌಡ.—ಈಗ ಸಿಕ್ಕುತ್ತಿರುವುದು ತಲಾ ಹತ್ತು ಗ್ಯಾಲನ್ ನೀರು. ಸರ್ವಸಾಮಾನ್ಯವಾಗಿ ಸ್ನಾನ, ಪಾನ, ಅಡಿಗೆ ಮುಂತಾದ್ದಕ್ಕೆ 50 ಗ್ಯಾಲನ್ ನೀರು ಬೇಕು. ಕೊನೆಯ ಪಕ್ಷ 30 ಗ್ಯಾಲನ್ ಆದರೂ ಬೇಕು. ಈಗ ಅಷ್ಟು ಕೂಡ ಇಲ್ಲವೆಂದು ಹೇಳುತ್ತಿದ್ದೇನೆ. ಇಪ್ಪತ್ತು ಗ್ಯಾಲನ್ ಸಿಕ್ಕುತ್ತಿದ್ದರೂ ನೀರಿಲ್ಲವೆಂದು ಮದರಾಸಿನಲ್ಲಿ ಹಾಹಾಕಾರ ಪಡುತ್ತಿದ್ದಾರೆ. ದೆಹಲಿಯಲ್ಲಿ 80 ಗ್ಯಾಲನ್

ಕೊಡುತ್ತಿದ್ದರೂ ಸಾಲುವುದಿಲ್ಲವೆಂದು ಹೇಳುತ್ತಿದ್ದಾರೆ. ಹೀಗಿರುವುದರಿಂದ ಕಾವೇರಿಯಿಂದ ನೀರನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದೇವೆ. ಈಗ ಅರ್ಕಾವತಿ ಹತ್ತಿರವಿದೆ, ತಿಪ್ಪಗೊಂಡನ ಹಳ್ಳಿಯಿಂದ ನೀರನ್ನು ತರುತ್ತಿದ್ದೇವೆ, ಅದಕ್ಕಿಂತ ಹತ್ತು ಮೈಲಿ ಕೆಳಗೆ ಅರ್ಕಾವತಿಯಿಂದ ತರುತ್ತೇವೆಂದು ಹೇಳುತ್ತಾರೆ. ಇದು ಬೇಡ, ಇದಕ್ಕೆ ಬದಲು ಕಾವೇರಿಯಿಂದ ತನ್ನಿ, ಹೆಚ್ಚು ಅನುಕೂಲವಾಗುತ್ತದೆ ಬೆಂಗಳೂರಿಗೆ ಎಂದು ನಾನು ಹೇಳುವುದು. ಒಟ್ಟಿನಲ್ಲಿ ಇದಕ್ಕೆ ವಿರೋಧವನ್ನು ಯಾರೂ ಸೂಚಿಸಿಲ್ಲ. ಬೆಂಗಳೂರಿಗೆ ಅಗತ್ಯವಾದ ನೀರನ್ನು ಸರಬರಾಯಿ ಮಾಡಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದನ್ನು ಸರ್ಕಾರ ಮಾಡಿಕೊಡಬೇಕೆಂದು ಸೂಚಿಸುತ್ತೇನೆ.

Mr. SPEAKER.—May I know whether the Hon'ble Member's intention is to press the resolution or withdraw it ?

ಶ್ರೀ ಟಿ. ಮಾದಯ್ಯ ಗೌಡ.—ಸ್ವಾಮಿ, ಮಾನ್ಯ ಮಂತ್ರಿಗಳು ದೀರ್ಘವಾಗಿ ಆಲೋಚನೆ ಮಾಡುತ್ತಿದ್ದಾರೆ. ಅವರು ಸಹಾನುಭೂತಿಯಿಂದ ಯೋಚನೆ ಮಾಡುತ್ತಾರೆಂದು ನನಗನಿಸುತ್ತದೆ. ಅಲ್ಲದೆ ಈ ದಿನ ನಡೆದ ಚರ್ಚೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆಂದು ಹೇಳುತ್ತಾರೆ; ಬಹಳ ಸಂತೋಷ. ನನ್ನ ಉದ್ದೇಶ ನೆರವೇರುತ್ತದೆಂದು ಕಂಡು ಬಂದಿರುವುದರಿಂದ ಈ ನಿರ್ಣಯವನ್ನು ವಾಪಸು ಪಡೆಯಲು ಅನುಮತಿಯನ್ನು ಕೇಳುತ್ತೇನೆ.

The resolution, was, by leave of the House, withdrawn.

NON-OFFICIAL RESOLUTION

***Re*: Constituting a Committee to examine the working of nationalised Transport Service in the State for improving the efficiency and to report to Government.**

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಮಾನ್ಯ ಅಧ್ಯಕ್ಷರೆ, ಸ್ವಾಮಿ ನನ್ನ ನಿರ್ಣಯ ಈ ರೀತಿ ಇದೆ: ''ರಾಜ್ಯದಲ್ಲಿನ ರಾಷ್ಟ್ರೀಕೃತ ಸಾರಿಗೆ ವ್ಯವಸ್ಥೆಯ ಕಾರ್ಯಾಚರಣೆಯ ಎಲ್ಲಾ ಅಂಶಗಳನ್ನೂ ಕೂಲಂಕುಷವಾಗಿ ಪರಿಶೀಲಿಸಿ, ಅದರ ದಕ್ಷತೆಯನ್ನು ಹೆಚ್ಚಿಸುವ ಬಗೆಗೂ, ಮೇಲಿಂದ ಮೇಲೆ ವಾಹನಗಳು ನಿಂತು ಹೋಗುವುದನ್ನೂ (ಬ್ರೇಕ್‌ಡೌನ್), ಅಪಘಾತಗಳನ್ನು ತಪ್ಪಿಸುವ ಬಗೆಗೂ ಮತ್ತು ಸಾರ್ವಜನಿಕರಿಗೆ ಸಂಚಾರ ಸೌಲಭ್ಯವನ್ನು ಕಡಮೆ ದರಗಳಲ್ಲಿ ಒದಗಿಸಲು ಅನುಕೂಲವಾಗುವಂತೆ ಆಡಳಿತದಲ್ಲಿ ಮಿತವ್ಯಯವನ್ನು ಸೂಚಿಸುವ ಬಗೆಗೂ ಸರ್ಕಾರಕ್ಕೆ ವರದಿಯೊಂದನ್ನು ಒಪ್ಪಿಸುವುದಕ್ಕಾಗಿ, ವಿಧಾನ ಮಂಡಲದ ಸದಸ್ಯರುಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಬೇಕೆಂದು ಈ ಸಭೆಯವರು ಸರ್ಕಾರಕ್ಕೆ ಶಿಫಾರಸು ಮಾಡುತ್ತಾರೆ.''

Mr. SPEAKER.—Resolution moved:

"That this Assembly recommends to the Government that a Committee of Members of the Legislature be constituted to thoroughly examine all aspects of the working of nationalised transport service in the State and to submit a report to Government to improve efficiency and for providing good service to the passengers and to avoid frequent break downs and accidents in the service and also to suggest economy in its administration so as to give reduced fares and travelling facility to the public."

Sri G. RAME GOWDA (Doddaballapur).—We agree to this resolution and there should be no discussion about this.

Mr. SPEAKER.—Has the Hon. Member taken the sense of every Member of the House? He has no right to make such a suggestion. The Hon. Member may kindly move the amendment.

Sri T. MADIAH GOWDA.—After the speech of the mover is over, I will exercise my right.

Sri G. V. GOWDA (Palya).—Amendments may be moved now so that the Hon. Mover may be able to refer to it.

Mr. SPEAKER.—If the Hon. Member who has tabled the amendment is not willing to move it, what can I do? The time allotted for this resolution is 3 hours. The Hon. Mover will take 15 minutes.

[MR. DEPUTY SPEAKER (Sri A. R. PANCHAGAVI) in the Chair.]

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಈ ದಿವಸ ನಮ್ಮ ಮುಂದಿರುವ ವಿಷಯ ಇಡೀ ದೇಶದ ಜನರ ದೃಷ್ಟಿಯಿಂದ ಬಹು ಮುಖ್ಯವಾದುದು. ಈ ರಾಷ್ಟ್ರೀಕರಣದ ಜವಾಬ್ದಾರಿ ಆಡಳಿತದ ಮೇಲೆ ಬಿದ್ದಿದೆ. ರಾಷ್ಟ್ರೀಕರಣವಾಗಬೇಕೆಂದು ಸುಮಾರು ಏಳು ವರ್ಷಗಳ ಹಿಂದೆ ನಾವೆಲ್ಲರೂ ಬಹಳ ಪ್ರಯತ್ನ ಮಾಡಿದುದು ನಿಜ. ಇದಕ್ಕೆ ಕಾರಣ ಇಷ್ಟೆ: ರಾಷ್ಟ್ರೀಕರಣ ಮಾಡಿದರೆ, ಜನರಿಗೆ ಸೌಕರ್ಯ ಒದಗುತ್ತದೆ, ಸಂಚಾರ ಸುಲಭವಾಗಿ ಸುರಕ್ಷಿತವಾಗಿ ನಡೆಯುತ್ತದೆ ಎಂಬ ಉದ್ದೇಶದಿಂದ ಮಾಡಿದ್ದು. ಅಲ್ಲದೆ ಖಾಸಗಿ ಜನರಂತೆ ಪ್ರಜೆಗಳನ್ನು ಶೋಷಣೆ ಮಾಡದೆ, ರಾಷ್ಟ್ರೀಕರಣವಾದಗೆ ಕಡಮೆ ದರದಲ್ಲಿ, ಕಾಲಕ್ಕೆ ಸರಿಯಾಗಿ ಬಸ್ಸುಗಳನ್ನು ನಡೆಸುತ್ತಾರೆ, ಪ್ರಯಾಣದಲ್ಲಿ ಸೀಟುಗಳು ಸುಲಭವಾಗಿ ದೊರೆತು ಜನರಿಗೆ ತೊಂದರೆ